


ಶ್ರೀಧರ ತುಮರಿ

# ಪಕ್ಷಿಗಳ ವಿಸ್ಮಯ ವಿಶ್ವ

ಚಿತ್ರಗಳು : ಕ್ಲೆಮೆಂಟ್ ಎಂ. ಫ್ರಾನ್ಸಿಸ್ | ಶ್ರೀಧರ ತುಮರಿ

# ಅನುಕ್ರಮಣಿಕೆ


| | | | |
|---|---|---|---|
| 1 | ಗುಳುಮುಳುಕ | Little Grebe or Dabachick | 13 |
| 2 | ಬೂದು ಜೋಳಿಗೆಕೊಕ್ಕು | Grey Pelican | 15 |
| 3 | ಸಣ್ಣ ನೀರುಕಾಗೆ | Little Cormorant | 17 |
| 4 | ನೀರುಕಾಗೆ | Indian Cormorant | 18 |
| 5 | ದೊಡ್ಡ ನೀರುಕಾಗೆ | Great Cormorant | 19 |
| 6 | ಹಾವಕ್ಕಿ | Darter | 20 |
| 7 | ಬೂದು ಬಕ | Grey Heron | 22 |
| 8 | ಕೊಳದ ಬಕ | Pond Heron | 23 |
| 9 | ರಾತ್ರಿ ಬಕ | Night Heron | 24 |
| 10 | ಬೆಳ್ಳಕ್ಕಿ | Egret | 25 |
| 11 | ಜಾನುವಾರು ಬೆಳ್ಳಕ್ಕಿ | Cattle Egret | 25 |
| 12 | ಸಣ್ಣ ಬೆಳ್ಳಕ್ಕಿ | Little Egret | 27 |
| 13 | ಮಧ್ಯಮಗಾತ್ರದ ಬೆಳ್ಳಕ್ಕಿ | Intermediate Egret | 27 |
| 14 | ದೊಡ್ಡ ಬೆಳ್ಳಕ್ಕಿ | Great Egret | 28 |
| 15 | ಹಸಿರು ಕುಕ್ಕ | Little Green Bittern | 28 |
| 16 | ಕೆಸರು ಕುಕ್ಕ | Chestnut Bittern | 29 |
| 17 | ಬಣ್ಣದ ಕೊಕ್ಕರೆ | Painted Stork | 30 |
| 18 | ಬಾಯ್ಕಳಕ ಕೊಕ್ಕರೆ | Openbill Stork | 32 |
| 19 | ಮಷಿಮಂಡೆ ಬಿಳಿಕೊಕ್ಕ | Blackheaded White Ibis | 33 |
| 20 | ಚಮಚಕೊಕ್ಕು | Spoonbill | 34 |
| 21 | ಗುಬುಟುಬಾತು | Coomb Duck | 36 |
| 22 | ಬೂದುಬಣ್ಣದ ಬಾತುಕೋಳಿ | Indian Spotbill Duck | 37 |
| 23 | ನೀಲಿರೆಕ್ಕೆಯ ಗೋರೆ | Garganey | 39 |
| 24 | ಪಟ್ಟೆಗೋರೆ | Common Teal | 41 |
| 25 | ಸೂಜಿಬಾಲ ಗೋರೆ | Pintail Teal | 43 |
| 26 | ಸಾಮಾನ್ಯ ಡೇಗೆ | Common Kestrel | 44 |
| 27 | ಹಕ್ಕಿಸೆಳವ | Pallid Harrier | 46 |
| 28 | ಬಿಳಿಗರುಡ | Brahminy Kite | 47 |




| | | | |
|---|---|---|---|
| 29 | ಜುಟ್ಟಿಗಿಡುಗ | Crested Hawk Eagle | 49 |
| 30 | ಹಾವುಗಿಡುಗ | Crested Serpent Eagle | 50 |
| 31 | ಕಪ್ಪುಗರುಡ | Black Kite (Common Pariah Kite) | 52 |
| 32 | ರಣಹದ್ದು | Bengal Vulture | 54 |
| 33 | ದೈತ್ಯ ರಣಹದ್ದು | King Vulture | 56 |
| 34 | ಬಿಳಿ ರಣಹದ್ದು | Egyptian Vulture (White Scavenger Vulture) | 57 |
| 35 | ನವಿಲು | Peacock | 59 |
| 36 | ಕಾಡುಕೋಳಿ | Jungle Faul | 61 |
| 37 | ಕವುಜಗ | Grey Francolin (Grey Patridge) | 63 |
| 38 | ಬಟೇರ | Common or Grey Quail | 64 |
| 39 | ಚಾಚುಕೋಳಿ | Red Spur fowl | 65 |
| 40 | ಚಿಪ್ಪುಗಾಲು ಕೋಳಿ | Common Coot | 66 |
| 41 | ಕೆನ್ನೀಲಿ ನೀರುಕೋಳಿ | Purple Moorhen | 67 |
| 42 | ಹುಂಡುಕೋಳಿ | Whitebreasted Waterhen | 68 |
| 43 | ಎರೆಲಡ್ಡು | Great Indian Bustard | 70 |
| 44 | ಕಾಡುಕೋಳಿಬಾಲದ ಜಕಾನ | Pheasant tailed Jacana | 72 |
| 45 | ಕಂದುರೆಕ್ಕೆಯ ಜಕಾನ | Bronze winged Jacana | 74 |
| 46 | ಪುಟಾಣಿ ಕರಿಪಟ್ಟೆ ಗೊರವ | Little Ringed Plover | 75 |
| 47 | ಕೆಂಪು ಜೋಲುಮಾಂಸದ ಟಿಟ್ಟಿಭ | Red wattled Lapwing | 77 |
| 48 | ಹಳದಿ ಜೋಲುಮಾಂಸದ ಟಿಟ್ಟಿಭ | Yellow wattled Lapwing | 78 |
| 49 | ಪಟ್ಟೆ ಇಸ್ನಾಪು | Painted Snipe | 79 |
| 50 | ಬೀಸಣಿಗೆಬಾಲದ ಇಸ್ನಾಪು | Common or Fantail Snipe | 80 |
| 51 | ಪುಟ್ಟ ಇಸ್ನಾಪು | Jack Snipe | 82 |
| 52 | ಮೀನು ಗುಟುರ | River Turn | 83 |
| 53 | ಕಲ್ಲು ಗೊರವ | Stone Curlew | 85 |
| 54 | ಗೊರವ | Curlew | 86 |
| 55 | ಸಾಮಾನ್ಯಮರಳು ಪೀಪಿ | Common Sandpiper | 87 |
| 56 | ಚುಕ್ಕೆ ಮರಳುಪೀಪಿ | Spotted Sandpiper | 88 |
| 57 | ಹಸಿರು ಮರಳುಪೀಪಿ | Green Sandpiper | 89 |
| 58 | ಹಲಸಿನ ಹಕ್ಕಿ | Spotted Dove | 90 |




| | | | |
|---|---|---|---|
| 59 | ಪಚ್ಚೆಹಸಿರಿನ ಹಲಸಿನ ಹಕ್ಕಿ | Emerald Dove | 91 |
| 60 | ಕಾಡು ಪಾರಿವಾಳ | Blue Rock Pigeon | 92 |
| 61 | ಹಸಿರು ಕಾಡಿನ ಪುಟಾಣಿ ಗಿಳಿ | Indian Lorikeet | 95 |
| 62 | ರಾಮಗಿಳಿ | Alexandrine Parakeet | 97 |
| 63 | ಗುಲಾಬಿ ಕೊರಳಿನ ಗಿಳಿ | Rose ringed Parakeet | 98 |
| 64 | ಕೆಂಬೂತ | Crow Pheasant (Greater Coucal) | 100 |
| 65 | ಕೋಗಿಲೆ | Asian Koel | 102 |
| 66 | ಕೋಗಿಲೆ ಚಾಣ | Common Hawk Cuckoo | 105 |
| 67 | ಚಾತಕ ಪಕ್ಷಿ | Pied Crested Cuckoo | 106 |
| 68 | ಕಣಜಗೂಬೆ | Common Barn Owl | 107 |
| 69 | ಗೂಬೆ | Owl | 107 |
| 70 | ಕಂದುಗಿಡುಗ ಗೂಬೆ | Brown Hawk Owl | 112 |
| 71 | ಕಾಡುಹಾಲಕ್ಕಿ ಗೂಬೆ | Jungle Owlet | 112 |
| 72 | ಹಾಲಕ್ಕಿ | Spotted Owlet | 113 |
| 73 | ಇಂಡಿಯನ್ ಚಿಟ್ಟು ಗೂಬೆ | Indian Scops Owl | 113 |
| 74 | ಕೊಂಬಿನ ಗೂಬೆ | Indian Eagle Owl or Rock Eagle Owl | 114 |
| 75 | ಚುಕ್ಕೆಕಾಡು ಗೂಬೆ | Mottled Wood Owl | 114 |
| 76 | ಕಂದುಕಾಡು ಗೂಬೆ | Brown Wood Owl | 115 |
| 77 | ಮೀನು ಗೂಬೆ | Brown Fish Owl | 116 |
| 78 | ಗಿಡುಗ ಗೂಬೆ | Spot bellied Eagle Owl | 116 |
| 79 | ಸಾಮಾನ್ಯ ಭಾರತೀಯ ನತ್ತಿಂಗ | Common Indian Night Jar | 117 |
| 80 | ಮನೆಬಾನಕ್ಕಿ | House Swift | 119 |
| 81 | ಪರ್ವತ ಬಾನಕ್ಕಿ | Alpine Swift | 120 |
| 82 | ಸೋಗೇ ಬಾನಕ್ಕಿ | Palm Swift | 122 |
| 83 | ಜುಟ್ಟಿಗ ಮರಬಾನಕ್ಕಿ | Crested Tree Swift | 124 |
| 84 | ಮಲಬಾರ್ ಕಾಕರ್ನೆ ಹಕ್ಕಿ | Malabar Trogon | 126 |
| 85 | ಮಿಂಚುಳ್ಳಿ | Kingfisher (White throated Kingfisher) | 128 |
| 86 | ಕಪ್ಪು ಬಿಳಿಪು ಮಿಂಚುಳ್ಳಿ | Pied Kingfisher | 130 |




| | | | |
|---|---|---|---|
| 87 | ನೀಲಿ ಕಿರುಮಿಂಚುಳ್ಳಿ | Small Blue Kingfisher | 131 |
| 88 | ದೈತ್ಯ ಮಿಂಚುಳ್ಳಿ | Stork billed Kingfisher | 132 |
| 89 | ಗಣೆಗಾರಲ ಹಕ್ಕಿಗಳು | Bee Eaters | 133 |
| 90 | ಹಸಿರು ಗಣೆಗಾರಲ ಹಕ್ಕಿ | Green Bee Eater | 134 |
| 91 | ನೀಲಿಬಾಲದ ಗಣೆಗಾರಲ ಹಕ್ಕಿ | Bluetailed Bee Eater | 134 |
| 92 | ಕೆಮ್ಮಣ್ಣುಮಂಡೆ ಗಣೆಗಾರಲಹಕ್ಕಿ | Chestnutheaded Bee Eater | 134 |
| 93 | ಬೆಚ್ಚಿಬೀಳಿಸುವ ಹುಲ್ಲು ಹಸಿರು ಜೇನುಬಾಕ | Blue bearded Bee Eater | 136 |
| 94 | ನೀಲಕಂಠ | Roller, Blue Jay | 138 |
| 95 | ದರ್ಜಿಹಕ್ಕಿ | Tailor Bird | 141 |
| 96 | ಗೆರೆ ಬೀಸಣಿಕೆ ಬಾಲದ ಉಲಿಯಕ್ಕಿ | Streaked Fantail Warbler | 143 |
| 97 | ಉಲಿಯಕ್ಕಿ | Ashy Wren Warbler | 144 |
| 98 | ಚಂದ್ರಮುಕುಟ ಹಕ್ಕಿ | Hoopoe | 146 |
| 99 | ಗಮಟೇಹಕ್ಕಿಯ ವಿಸ್ಮಯ ವಿಶ್ವ | Hornbill | 149 |
| 100 | ಮಲಬಾರು ಬೂದು ಗಮಟೇಹಕ್ಕಿ | Malabar Grey Hornbill | 152 |
| 101 | ಸಾಮಾನ್ಯ ಬೂದು ಗಮಟೇಹಕ್ಕಿ | Common Grey Hornbill | 152 |
| 102 | ಮಲಬಾರ್ ಶಿರಸ್ತ್ರಾಣ ಗಮಟೇಹಕ್ಕಿ | Malabar Pied Hornbill | 153 |
| 103 | ಭಾರತದ ದೊಡ್ಡ ಗಮಟೇಹಕ್ಕಿ | Great Pied Hornbill | 153 |
| 104 | ಗುಟ್ರಗುಮ್ಮ | Barbet | 154 |
| 105 | ಚಂಬುಕುಟಿಗ | Coppersmith | 156 |
| 106 | ಮರಕುಟುಕ | Woodpecker | 158 |
| 107 | ಹೆಮ್ಮರಕುಟುಕ | White bellied Woodpecker | 160 |
| 108 | ಹೃದಯ ಗುರುತಿನ ಮರಕುಟುಕ | Heart spotted Woodpecker | 160 |
| 109 | ಹೊಂಬಣ್ಣದ ಬೆನ್ನಿನ ಮರಕುಟುಕ | Grecter Golden backed Woodpecker | 161 |
| 110 | ಕಂದು ಬಣ್ಣದ ಮರಕುಟುಕ | Rufous Woodpecker | 161 |
| 111 | ನೆಲಗುಪ್ಪು ಹಕ್ಕಿ | Indian Pitta | 162 |
| 112 | ನೆಲಗುಬ್ಬಿ | Lark | 164 |
| 113 | ಭಾರತದ ಮಟ್ಟಿನೆಲಗುಬ್ಬಿ | Indian Bushlark | 165 |
| 114 | ಜರ್ಡನ್ಸ್ ಮಟ್ಟಿನೆಲಗುಬ್ಬಿ | Jerden Bushlark | 165 |
| 115 | ಹಾಡುವ ಮಟ್ಟಿನೆಲಗುಬ್ಬಿ | Singing Bushlark | 165 |
| 116 | ಬೂದುಗುಬ್ಬಚ್ಚಿ ನೆಲಗುಬ್ಬಿ | Ashy Crowned Sparrowlark | 166 |




| | | | |
|---|---|---|---|
| 117 | ಕೆಂಗಂದುಬಾಲದ ನೆಲಗುಬ್ಬಿ | Rufous tailed Lark | 166 |
| 118 | ಗಿಡ್ಡ ತುದಿಗಾಲು ನೆಲಗುಬ್ಬಿ | Greater Short toed Lark | 167 |
| 119 | ಮಲಬಾರು ನೆಲಗುಬ್ಬಿ | Malabar Lark | 167 |
| 120 | ಸೈಕ್ಸ್ ನೆಲಗುಬ್ಬಿ | Sykes's Lark | 168 |
| 121 | ಓರಿಯೆಂಟಲ್ ಆಗಸ ನೆಲಗುಬ್ಬಿ | Oriental Skylark | 168 |
| 122 | ಸಾಮಾನ್ಯ ಕವಲುತೋಕೆ | Common Swallow | 169 |
| 123 | ತಂತಿಬಾಲದ ಕವಲುತೋಕೆ | Wire tailed Swallow | 171 |
| 124 | ಕೆಂಪು ಪೃಷ್ಠದ ಕವಲುತೋಕೆ | Red rumped Swallow | 171 |
| 125 | ಕಳಿಂಗ | Shrike | 173 |
| 126 | ಕರಿಮಂಡೆ ಸುವರ್ಣಪಕ್ಷಿ | Black headed Oriole | 175 |
| 127 | ಸುವರ್ಣಪಕ್ಷಿ | Golden Oriole | 176 |
| 128 | ಕಾಜಾಣ | Drongo | 177 |
| 129 | ಜೋಡುಬಾಲದ ಕಾಜಾಣ | Greater Racket-tailed Drongo | 178 |
| 130 | ಮೈನಾಹಕ್ಕಿ | Common Myna | 180 |
| 131 | ಗುಡ್ಡಗಾಡು ಮೈನಾ | Hill Myna | 182 |
| 132 | ಕಾಗೆಗಳ ಭಯಾನಕ ಅಂತರಂಗ | Crow (Jungle) | 183 |
| 133 | ಕುಂಬಾರಕಾಗೆ | House Crow | 185 |
| 134 | ಕದುಗನ ಹಕ್ಕಿ | Rufous Tree Pie | 186 |
| 135 | ಬಿಳಿ ಕದುಗನ ಹಕ್ಕಿ | White bellied Tree Pie | 188 |
| 136 | ಜ್ವಾಲನಹಕ್ಕಿ | Scarlet Minivet | 189 |
| 137 | ಗಾಂಧೀ ಹಕ್ಕಿ | Common Iora | 191 |
| 138 | ಕೋಮಲ ನೀಲಪಕ್ಷಿ | Fairy Blue Bird | 193 |
| 139 | ಜುಟ್ಟಿಗ ಹಕ್ಕಿ | Bulbul | 195 |
| 140 | ಕೆಂಪು ಗಲ್ಲದ ಜುಟ್ಟಿಗ | Red Whiskered Bulbul | 196 |
| 141 | ಕೆಂಪು ಬಾಲದ ಜುಟ್ಟಿಗ | Red Vented Bulbul | 196 |
| 142 | ಮಲೆನಾಡಿನ ಚೇತನ ಕಾಡುಬೊಬ್ಬೆ ಹಕ್ಕಿ | Jungle Babbler | 198 |
| 143 | ಸಾಮಾನ್ಯ ಬೊಬ್ಬೆ ಹಕ್ಕಿ | Common Babbler | 200 |
| 144 | ಬಿಳಿತಲೆ ಬೊಬ್ಬೆಹಕ್ಕಿ | White headed Babbler (Yellow billed Babbler) | 200 |
| 145 | ಉದ್ದಬಾಲದ ಹಕ್ಕಿ | Paradise Flycatcher | 201 |
| 146 | ಬಿಳಿ ಬೀಸಣಿಗೆ ಬಾಲದ ಹುಳಹಿಡುಕ | White Throted Fantail Flycatcher | 203 |




| | | | |
|---|---|---|---|
| 147 | ನೀಲೀ ಹುಳಹಿಡುಕ | Verdicter Flycatcher | 204 |
| 148 | ಕೆಂಪು ಎದೆಯ ಹುಳಹಿಡುಕ | Red Brested Flycatcher | 205 |
| 149 | ಶಮಾ | White rumped Shama | 206 |
| 150 | ಗೋಪೀ ಹಕ್ಕಿ | Malabar Whistling Thrush | 208 |
| 151 | ತರಗೆಲೆ ಹಕ್ಕಿ | White Throated Ground Thrush | 210 |
| 152 | ಮಡಿವಾಳ ಹಕ್ಕಿ | Magpie Robin | 211 |
| 153 | ಚಿಟ್ಟು ಮಡಿವಾಳ | Indian Robin | 213 |
| 154 | ಹಳದಿ ಕುಂಡೆಕುಣಿಸುವ ಹಕ್ಕಿ | Yellow Wagtail | 215 |
| 155 | ಬೂದುಬಣ್ಣದ ಕುಂಡೆಕುಣಿಸುವ ಹಕ್ಕಿ | Grey Wagtail | 217 |
| 156 | ಬಿಳೀಬಣ್ಣದ ಕುಂಡೆಕುಣಿಸುವ ಹಕ್ಕಿ | White Wagtail | 218 |
| 157 | ಕಪ್ಪುಬಿಳಿ ಕುಂಡೆಕುಣಿಸುವ ಹಕ್ಕಿ | White browed Wagtail | 219 |
| 158 | ಹೂ ಕುಟುಕ | Flower Pecker | 220 |
| 159 | ಗುಬ್ಬಚ್ಚಿ | Sparrow | 223 |
| 160 | ಕೆನ್ನೀಲಿ ಸೂರಕ್ಕಿ | Purple Sun Bird | 226 |
| 161 | ಕೆನ್ನೀಲಿ ಪೃಷ್ಠದ ಸೂರಕ್ಕಿ | Purple rumped Sun Bird | 228 |
| 162 | ಹಿಂಬದಿ ಹಳದಿಬಣ್ಣ ಹೊಂದಿದ ಸೂರಕ್ಕಿ | Yellow backed Sun Bird | 228 |
| 163 | ಉದ್ದಕೊಕ್ಕಿನ ಹಾಗೂ ಕೆಂಗಂದು ಎದೆಯ ಸೂರಕ್ಕಿ | Loten Sun Bird | 229 |
| 164 | ಬಾಳೇಗುಬ್ಬಿ | Spider Hunter | 230 |
| 165 | ಬಿಳೀಕಣ್ಣು | White Eye | 232 |
| 166 | ಗೀಜಗ | Baya Weaver Bird | 234 |
| 167 | ಹುಲ್ಲೀಹಕ್ಕಿ – ಗೀಜೀಹಕ್ಕಿ | Munia | 237 |
| 168 | ಚುಕ್ಕೆ ಮುನಿಯಾ | Scaly breasted Munia | 239 |
| 169 | ಕೆಂಪು ಮುನಿಯಾ | Red Munia | 239 |
| 170 | ಬಿಳಿಬೆನ್ನಿನ ಮುನಿಯಾ | White rumped Munia | 240 |
| 171 | ಹಸಿರು ಮುನಿಯಾ | Green Munia | 240 |
| | ಪಕ್ಷಿಗಳ ಕನ್ನಡ, ಇಂಗ್ಲಿಷ್, ವೈಜ್ಞಾನಿಕ ಹೆಸರುಗಳ ಸೂಚಿ | | 243 |




ಈ ಪಕ್ಷಿಗೆ ಇಂಗ್ಲಿಷಿನಲ್ಲಿ ಕಾರ್ಮೊರಾಂಟ್ (Cormorant). ನೀರುಕಾಗೆ ಎನ್ನುತ್ತಾರೆ. ಎಲ್ಲಾ ಜಾತಿಯ ನೀರುಕಾಗೆಗಳೂ ಫ್ಯಾಲ್ಯಾಕ್ರೋಕೊರಾಸಡೇ *(Phalacrocoracidae)* ಕುಟುಂಬಕ್ಕೆ ಸೇರುತ್ತವೆ. ನಮ್ಮ ದೇಶದ ಪಕ್ಷಿಧಾಮಗಳಲ್ಲಿ ಮೂರು ಜಾತಿಯ ನೀರುಕಾಗೆಗಳಿವೆ. ಸಣ್ಣನೀರುಕಾಗೆ (Little Cormorant) ಜೊತೆಗೆ ಇವುಗಳನ್ನೇ ಹೋಲುವ ಇಂಡಿಯನ್ ನೀರುಕಾಗೆ, (Indian Shag) ಮತ್ತು ದೊಡ್ಡ ನೀರುಕಾಗೆ (Great Cormorant). ಇವೆಲ್ಲವೂ ಭಾರತ, ಥಾಯ್‌ಲ್ಯಾಂಡ್, ಶ್ರೀಲಂಕಾ ಮತ್ತು ಬರ್ಮಾಗಳಲ್ಲಿಯೂ ಕಾಣುತ್ತವೆ. ಆದರೆ ಗ್ಯಾಲಪೊಗಸ್ ದ್ವೀಪದಲ್ಲಿ ಹಾರಲು ಬಾರದ ನೀರುಕಾಗೆಗಳೂ ಉಂಟು.

## ದೊಡ್ಡ ನೀರುಕಾಗೆ Great Cormorant



ದೊಡ್ಡ ನೀರುಕಾಗೆ ಗಾತ್ರದಲ್ಲಿ ಬಾತುಕೋಳಿಯಷ್ಟಿದ್ದು ದೇಹದ ಬಣ್ಣ ಕಪ್ಪು. ಇವೆರಡಕ್ಕೂ ಹೋಲಿಸಿದರೆ ದೊಡ್ಡತಲೆ, ದಪ್ಪಕುತ್ತಿಗೆ ಮತ್ತು ಉದ್ದ ದಪ್ಪಕೊಕ್ಕು. ಅದು ಕುಳಿತಾಗ ನೋಡಿದರೆ ಸ್ಪಷ್ಟವಾಗಿ ಕಾಣುವುದು. ಉಳಿದ ಕಾಲದಲ್ಲಿ ಹಳದೀ ಮಚ್ಚೆ, ಬಿಳಿಯ ಕುತ್ತಿಗೆ ಮತ್ತು ಗಲ್ಲ. ಮರಿ ಮಾಡುವ ಕಾಲದಲ್ಲಿ ತಲೆ ಮತ್ತು ಕುತ್ತಿಗೆಯ ಮೇಲೆ ಬಿಳಿಯ ಲೇಪನ ಮೂಡುತ್ತದೆ. ಹಾಗೂ ಕೆಂಪು ಬಣ್ಣ ಕೊಕ್ಕಿನ ಬುಡದಲ್ಲಿ ಕಾಣುವುದು. ಹಾರುವಾಗ ದೇಹದ ಎರಡೂ ಬದಿಗಳಲ್ಲಿ ಮೂಡಿದ ಬಿಳಿಯ ಲೇಪನ ಗೋಚರಿಸುವುದು. ಉಳಿದವುಗಳಿಗೆ ಹೋಲಿಸಿದರೆ ರೆಕ್ಕೆಗಳನ್ನು ನಿಧಾನವಾಗಿ ಬಡಿಯುವುದು.

ಇಂಡಿಯನ್ ನೀರುಕಾಗೆ, (ಶ್ಯಾಗ್) ಇವೆರಡರ ಮಧ್ಯಮ ಗಾತ್ರದ್ದು. ಬಡಕಲು ದೇಹ, ಅಂಡಾಕಾರದ ತಲೆ, ಸಪೂರ ಉದ್ದಕೊಕ್ಕು. ಮರಿಮಾಡುವ ಸಮಯದ ಗಂಡು ನೋಡಲು ಹೊಳೆಯುವ ಕಪ್ಪು, ಜೊತೆಗೆ ಹಸಿರು ನೀಲಿಕಣ್ಣು, ಕಿವಿಯ ಹತ್ತಿರ ಬಿಳಿಗರಿಗಳು ಬಂದಿರುವುದು. ಉಳಿದ ಕಾಲದಲ್ಲಿ ಕಂದು ಬಣ್ಣ, ಹಳದಿ ಮಚ್ಚೆ ಮತ್ತು ಕುತ್ತಿಗೆ ಬಿಳಿ ಇರುವುದು.

ಜಪಾನೀಯರು ಸಣ್ಣ ನೀರುಕಾಗೆಯನ್ನು ಮೀನುಹಿಡಿಯುವ ಸಾಧನವಾಗಿ ಬಳಸಿಕೊಳ್ಳುತ್ತಾರೆ. ಇದು ಸಾವಿರದ ಮುನ್ನೂರು ವರುಷದ ಹಳೆಯ ಉದ್ಯಮ. ಹಿಂದಿನ ದಿನಗಳಲ್ಲಿ ಯಶಸ್ವಿಯಾಗಿ ನಡೆಯುತ್ತಿದ್ದ ಬೃಹತ್ ಉದ್ಯಮ ಎಂದರೆ ತಪ್ಪಾಗಲಾರದು. ಜಪಾನಿನ ಯೂಜಿ ನದಿಯಲ್ಲಿ ಆಯು ಎನ್ನುವ ಜಾತಿಯ ಮೀನುಗಳನ್ನು ನೀರುಕಾಗೆಗಳಿಂದ ಹಿಡಿಯುವುದು ಬಹಳ ವಿಶೇಷ. ಆದರೆ ಈಗ ಅದು ಜನಪ್ರಿಯವಾದ ಪ್ರವಾಸೋದ್ಯಮ ಆಕರ್ಷಣೆಯ ಸಾಧನವಾಗಿ ಸೀಮಿತಗೊಂಡಿದೆ. ಅಲ್ಲದೆ ಪರಿಸರವಾದಿಗಳ ತೀವ್ರಖಂಡನೆಗೂ ಗುರಿಯಾಗಿರುವ ವಿಚಾರ. ನೀರುಕಾಗೆಗಳನ್ನು ಚಳಿಗಾಲದಲ್ಲಿ ಹಿಡಿದು ಕೆಲವು ಪ್ರಧಾನವಾದ ಗರಿಗಳನ್ನು ಅಮಾನುಷವಾಗಿ ಕಿತ್ತು, ಅವುಗಳಿಗೆ ಹಾರಲಾಗದಂತೆ ಮಾಡಿ ವಿಶೇಷ ತರಬೇತಿ ನೀಡಿ, ಕುತ್ತಿಗೆಗೆ ಉಂಗುರ ಕಟ್ಟಿ ದಾರದ ಮೂಲಕ ಹಿಡಿದುಕೊಂಡು ತರುತ್ತಾರೆ. ಪ್ರತಿಯೊಂದು ದೋಣಿಯಲ್ಲಿಯೂ ಈ ರೀತಿಯ ಹತ್ತು–ಹನ್ನೆರಡು ನೀರುಕಾಗೆಗಳನ್ನು ಇಟ್ಟುಕೊಂಡಿರುತ್ತಾರೆ. ಈ ಸ್ಥಿತಿಯಲ್ಲಿ ಅದು ಚಿಕ್ಕಮೀನುಗಳನ್ನು ಮಾತ್ರ ನುಂಗಿ ಉಳಿದ ದೊಡ್ಡಮೀನುಗಳನ್ನು ಬಾಯಲ್ಲಿ ಕಚ್ಚಿಹಿಡಿದು ಗಂಟಲಿನಲ್ಲಿ ಇಳಿಯಲಾರದ ಮೀನುಗಳನ್ನು ಒಡೆಯನಿಗೆ ನೀಡುವುದನ್ನು ರೂಢಿಸಿಕೊಂಡಿರುತ್ತವೆ. ಅವುಗಳಿಗೆ ಹಸಿವು ಜಾಸ್ತಿಯಾದ ಹಾಗೆ ಮೀನುಗಳ ಬೇಟೆಯೂ ಚುರುಕಾಗುವುದು. ಕಡಿಮೆ ಎಂದರೂ ಘಂಟೆಗೆ ಸರಾಸರಿ ನೂರಾಐವತ್ತು ಮೀನುಗಳಿಗೆ ಕಡಿಮೆಯಿಲ್ಲದೆ ಹಿಡಿಯುತ್ತವೆ. ಪಾಪ, ಒಮ್ಮೆ ದುಡಿಮೆಗೆ ಇಳಿದ ನೀರುಕಾಗೆಗಳು ಸಾಯುವವರೆಗೂ ಇವರ ಕೈಯಲ್ಲೇ ಇರುತ್ತವೆ !



## ಬೂದು ಬಕ / ಕಬ್ಬಾರೆ Grey Heron

ಬೂದು ಬಕದ ಬೇಟೆಯ ರೀತಿಯನ್ನು ನೋಡಿದಾಗ ಬಕಪಕ್ಷಿ ಕಾದಂತೆ ಎನ್ನುವ ಗಾದೆಮಾತು ನಿಜ. ಈ ಹಕ್ಕಿಯನ್ನು ನಾವು ಏಕಾಂಗಿಯಾಗಿಯೇ ನೋಡುತ್ತೇವೆ. ಆಹಾರಕ್ಕಾಗಿ ಹೊಂಚುಹಾಕಿ ಕಾಯುವುದು. ಒಂದು ಕಾಲು ನೀರಿನಲ್ಲಿದ್ದು ಮತ್ತೊಂದನ್ನು ಮೇಲೆತ್ತಿ, ಅದನ್ನ ಕೆಳಗಿಟ್ಟರೆ ನೀರಿನ ಅಲೆಗಳು ನಿರ್ಮಾಣವಾಗಿ ಬೇಟೆ ತಪ್ಪುವುದು ಎಂದು ಕಲ್ಲುಬಂಡೆಯಂತೆ ಬಹಳ ಹೊತ್ತು ಒಂಟಿ ಕಾಲಿನಲ್ಲಿಯೇ ನಿಲ್ಲುವುದು ಕ್ರಮ. ತನ್ನ ಹೊಡೆತದ ಅಂತರದೊಳಗೆ ಬೇಟೆ ಬಂದ ತಕ್ಷಣ ಕೊಕ್ಕು ಹಾಕಿ ಮೀನನ್ನು ಹಿಡಿಯುವುದು. ಮೀನುಗಳಿಗೆ ಎಷ್ಟೋ ಸಾರಿ ಈಟಿಯಂತಹ ಮೊನಚು ಕೊಕ್ಕಿನಿಂದ ಚುಚ್ಚಿ ನೀರಿನಿಂದ ಹೊರ ತೆಗೆದು ಜಾಡಿಸಿ ಮೀನಿನ ತಲೆ ಬಾಯಿಯೊಳಗೆ ಮೊದಲು ಹೋಗುವಂತೆ ಮಾಡಿಕೊಂಡು ತಿನ್ನುವುದು. ಏಡಿಗಳು ಮಣ್ಣಿನ ಕುಣಿಯಿಂದ ಹೊರಬರುವವರೆಗೆ ತಾಳ್ಮೆಯಿಂದ ಕಾದು ಹಿಡಿದು ಭಕ್ಷಿಸುವುದು ಮಾಮೂಲು. ಇದರ ಮುಖ್ಯವಾದ ಆಹಾರವೇ ಮೀನು, ಕಪ್ಪೆ, ಏಡಿ ಮತ್ತು ಕೆಲವು ಸಮಯದಲ್ಲಿ ಪುಟ್ಟಹಕ್ಕಿ ಮರಿಗಳನ್ನು ತಿನ್ನಲೂ ಹಿಂದೆ ಮುಂದೆ ನೋಡುವುದಿಲ್ಲ!

ಸಾಮಾನ್ಯವಾಗಿ ನದಿ, ಕೊಳ ಇಲ್ಲವೇ ಯಾವುದಾದರೂ ನೀರಿನ ಆಶ್ರಯವಿರುವ ಜಾಗದಲ್ಲಿ ಬೂದುಬಕ ಕಾಣುವುದು. ಐಬಿಸ್ ಗಾತ್ರದ ಕಂದುಬಣ್ಣದ ಉದ್ದಕಾಲಿನ ಹಕ್ಕಿ. ಮೇಲ್ಭಾಗವೆಲ್ಲಾ ಹೆಸರಿಗೆ ಅನ್ವಯವಾಗುವಂತೆ ಬೂದುಬಣ್ಣ, ಕುತ್ತಿಗೆ ಮತ್ತು ತಲೆ ಬಿಳಿ, ತಳಭಾಗ, ಎದೆ ಮತ್ತು ಹೊಟ್ಟೆ ತೆಳುವಾದ ಕಂದುಬಣ್ಣದ ಬಿಳಿಛಾಯೆ. ಉದ್ದ ಕುತ್ತಿಗೆ, ಒಂದು ರೀತಿಯಲ್ಲಿ ಎರಡು ಬದಿ ಅಂದರೆ ತಲೆಕಡೆ ಮತ್ತು ಹೊಟ್ಟೆಯ ವಿರುದ್ಧ ದಿಕ್ಕಿನಲ್ಲಿ **"S"** ಆಕಾರದಲ್ಲಿ ಬಾಗಿರುವುದು. ನೇರ ತಲೆಯೆತ್ತಿದಾಗ ಜಿರಾಫೆಯ ಕುತ್ತಿಗೆಯಂತೆ ಉದ್ದವಾಗಿ ಕಾಣುವುದು. ಬಾಕುವಿನ ಆಕಾರದ ಉದ್ದನೆಯ ಕೆಂಪು/ಕಂದು/ಅರಸಿನ ಬಣ್ಣದ ಮೊನಚಾದ ಕೊಕ್ಕು. ಕುತ್ತಿಗೆಯ ಮೇಲಿನಿಂದ ಎದೆಯ ಬುಡದವರೆಗೂ ಹಾಗೂ ಮುಂಗತ್ತಿನ ಮೇಲೆ ಕಪ್ಪು ಚುಕ್ಕೆಯ ಗೆರೆಗಳು. ತಲೆಯ ಮೇಲೆ ಉದ್ದನೆಯ ಕಪ್ಪುಜುಟ್ಟು ಹಿಮ್ಮುಖವಾಗಿ ಬಾಗಿರುವುದು. ಗಂಡು–ಹೆಣ್ಣು ನೋಡಲು ವ್ಯತ್ಯಾಸ ಕಾಣುವುದಿಲ್ಲ. ಹೆಣ್ಣು ಹಕ್ಕಿಗೆ ತಲೆಯ ಮೇಲೆ ಕಪ್ಪುಜುಟ್ಟು, ಕುತ್ತಿಗೆಯ ಮೇಲಿನಿಂದ ಎದೆಯ ಬುಡದವರೆಗೂ ಹಾಗೂ ಮುಂಗತ್ತಿನ ಮೇಲಿನ ಕಪ್ಪು ಚುಕ್ಕೆಯ ಗೆರೆಗಳು ತೆಳುವಾಗಿರುತ್ತವೆ.

ಹಾರುವಾಗ ಪ್ರಾಸಬದ್ಧವಾಗಿ ರೆಕ್ಕೆ ಬಡಿಯುತ್ತಾ ಕತ್ತನ್ನು ಮುಂದೆ ಚಾಚಿ ಕಾಲನ್ನು ಹಿಂದೆ ಉದ್ದವಾಗಿ ಚಾಚಿರುವುದು. ಕೆಲವೊಮ್ಮೆ ಕತ್ತನ್ನು ಎರಡು ರೆಕ್ಕೆಗಳ ಮಧ್ಯೆ ಹುದುಗಿಸಿಕೊಂಡೂ ಸಾಗುವುದು. ಹಾಗೆಯೇ ರೆಕ್ಕೆ ಬಿಚ್ಚಿ ತೇಲುತ್ತಾ ಸಾಗಿ ಕೆಳಗೆ ಇಳಿಯುವುದು. ಇವುಗಳು ಹಾರುವುದಕ್ಕಿಂತ ಹೆಚ್ಚಾಗಿ ನೆಲದ ಮೇಲೆ ಓಡಾಡುವ ಸಮಯವೇ ಹೆಚ್ಚು.

## ಸಣ್ಣ ಬೆಳ್ಳಕ್ಕಿ Little Egret



ಸಣ್ಣ ಬೆಳ್ಳಕ್ಕಿ ನೋಡಲು ಅತ್ಯಂತ ನಯವಾಗಿ ಕಾಣುವುದು. ಗಾತ್ರದಲ್ಲಿ ಜಾನುವಾರು ಬೆಳ್ಳಕ್ಕಿಗಿಂತ ತುಸು ದೊಡ್ಡದು. ಯಾವಾಗಲೂ ಹೊಸದಾಗಿ ಹರಿಯುವ ನೀರಿನ ಕಡೆ ಇರುವುದು ಜಾಸ್ತಿ. ಆದರೆ ಸಮುದ್ರದ ಬದಿಗೆ ಹೋಗುವುದಿಲ್ಲ. ಉಳಿದ ಎಲ್ಲಾ ನೀರುಹಕ್ಕಿಗಳ ಜೊತೆ ಬೆರೆತುಕೊಂಡಿರುತ್ತವೆ. ನೋಡಲು ಚಿಕ್ಕದಾಗಿ ಕಂಡರೂ ದೇಹದ ರಚನೆ ಅಚ್ಚುಕಟ್ಟಾಗಿರುವುದು. ಅತ್ಯಂತ ತೆಳುವಾಗಿ 'S' ರೀತಿಯ ಕುತ್ತಿಗೆ, ಅಂಡಾಕಾರ / ತ್ರಿಕೋನಾಕಾರದ ತಲೆ, ಉಳಿದವುಗಳಿಗೆ ಹೋಲಿಸಿದರೆ ಉದ್ದನೆಯ ಕಪ್ಪುಕೊಕ್ಕು. ಕಾಲು ಕಪ್ಪು. ಅದಕ್ಕೆ ಹಳದಿ ಬಣ್ಣದ ಪಾದಗಳು ಎದ್ದು ಕಾಣುವುದು. ಮರಿಮಾಡುವ ಕಾಲದಲ್ಲಿ ತಲೆಯ ಮೇಲೆ ಉದ್ದವಾದ ಜುಟ್ಟಿನ ತರಹ ಎರಡು ಗರಿ ಎಳೆಗಳು ಮೂಡಿರುವುದು. ಅದೇ ರೀತಿ ದಪ್ಪ ಆಲಂಕಾರಿಕ ಗರಿಗಳು ಬೆನ್ನು ಮತ್ತು ಎದೆಯ ಮೇಲೆ ಬಂದಿರುವುದು. ಗೂಡುಮಾಡುವುದು, ಮೊಟ್ಟೆಯಿಟ್ಟು ಮರಿಮಾಡುವುದು ಎಲ್ಲಾ ಜಾನುವಾರು ಬೆಳ್ಳಕ್ಕಿಯಂತೆಯೇ ಇರುವುದು. ಮೊಟ್ಟೆಯ ಬಣ್ಣ ಮಾತ್ರ ತಿಳಿನೀಲಿ ಹಸಿರು.

## ಮಧ್ಯಮಗಾತ್ರದ ಬೆಳ್ಳಕ್ಕಿ Intermediate Egret



ಬೆಳ್ಳಕ್ಕಿಗಳಲ್ಲಿಯೇ ಸ್ವಲ್ಪ ಬೇರೇ ರೀತಿ ಇರುವುದು ಮಧ್ಯಮಗಾತ್ರದ ಬೆಳ್ಳಕ್ಕಿ. ಇದೂ ಸಹ ದಷ್ಟಪುಷ್ಟವಾದ ಮೈಕಟ್ಟು, ದಪ್ಪವಾದ ಕುತ್ತಿಗೆ, ದೊಡ್ಡ ದೇಹದಿಂದಾಗಿ ಕಾಲುಗಳು ಚಿಕ್ಕದಾಗಿ ಕಾಣಿಸುತ್ತವೆ. ಉಳಿದ ಎಲ್ಲಾ ನೀರು ಹಕ್ಕಿಗಳ ಜೊತೆ ಬೆರೆತುಕೊಂಡಿರುವುದು. ಗುಂಪಿನಲ್ಲಿ ನೋಡಿದಾಗ ಗಾತ್ರದಲ್ಲಿ ಜಾನುವಾರು ಬೆಳ್ಳಕ್ಕಿ ಮತ್ತು ಸಣ್ಣ ಬೆಳ್ಳಕ್ಕಿಗಿಂತ ದೊಡ್ಡದಾಗಿ, ದೊಡ್ಡ ಬೆಳ್ಳಕ್ಕಿಗಿಂತ ಚಿಕ್ಕದಾಗಿ ಕಾಣಿಸುವುದು. ಕೊಕ್ಕು ದೇಹಕ್ಕೆ ಹೋಲಿಸಿದರೆ ಸ್ವಲ್ಪ ಚಿಕ್ಕದು. ಮರಿಮಾಡುವ ಕಾಲದಲ್ಲಿ ಕೊಕ್ಕು ಕಪ್ಪಾಗಿರುವುದು, ಉಳಿದ ಸಮಯದಲ್ಲಿ ಹಳದಿ. ಬೆನ್ನಿನ ಮೇಲೆ, ಎದೆಯ ಮೇಲೆ ಮತ್ತು ಬೆನ್ನಿನ ಕೆಳಭಾಗ ಪಕ್ಕೆಯ ಮೇಲೆ ಆಲಂಕಾರಿಕ ಮೃದುಗುಚ್ಛ ಬೆಳೆದಿರುವುದು. ಅಗಲವಾದ ರೆಕ್ಕೆ, ದೊಡ್ಡ ಬೆಳ್ಳಕ್ಕಿಗಿಂತ ಚಿಕ್ಕದಾದ ಕಾಲುಗಳು. ಹಿಂಭಾಗದ ತೂಕ ಜಾಸ್ತಿ ಇರುವುದು ಚಲನೆಯಲ್ಲಿಯೇ ಗೊತ್ತಾಗುವುದು. ಮಧ್ಯಮ ಗಾತ್ರದ ಬೆಳ್ಳಕ್ಕಿಗೂ ಜಾನುವಾರು ಬೆಳ್ಳಕ್ಕಿಗೂ ಇರುವ ವ್ಯತ್ಯಾಸವೆಂದರೆ: ಮಧ್ಯಮ ಗಾತ್ರದ ಬೆಳ್ಳಕ್ಕಿಗೆ ನೇರವಾದ ಕೊಕ್ಕು, ಕುತ್ತಿಗೆ ಹುದುಗಿಕೊಂಡಿರುವುದು, ಮರಿಮಾಡುವ ಕಾಲದಲ್ಲಿ ಎದೆಯ ಮೇಲೆ ಆಲಂಕಾರಿಕ ಮೃದುಗುಚ್ಛ ಬೆಳೆದಿರುತ್ತದೆ. ಉದ್ದಕಾಲು. ಜಾನುವಾರು ಬೆಳ್ಳಕ್ಕಿಗೆ, ಕೊಕ್ಕು ತುದಿಯಲ್ಲಿ ಬಗ್ಗಿರುತ್ತದೆ. ಗಿಡ್ಡಕುತ್ತಿಗೆ, ಮರಿಮಾಡುವ ಕಾಲದಲ್ಲಿ ಎದೆಯ ಮೇಲೆ ಆಲಂಕಾರಿಕ ಮೃದುಗುಚ್ಛ ಬೆಳೆದಿರುವುದಿಲ್ಲ. ಗಿಡ್ಡವಾದ ಕಾಲು. ಗೂಡುಮಾಡುವುದು, ಮೊಟ್ಟೆಯಿಟ್ಟು ಮರಿಮಾಡುವುದು ಎಲ್ಲಾ ಜಾನುವಾರು ಬೆಳ್ಳಕ್ಕಿಯಂತೆಯೇ ಇರುವುದು.



## ಸಾಮಾನ್ಯ ಡೇಗೆ / ಚೋರೆ ಚಾಣ Common Kestrel

ನೀಲಿ ಆಗಸದಲ್ಲಿ ರೆಕ್ಕೆಬಿಚ್ಚಿ ಸ್ವಚ್ಛಂದವಾಗಿ ತೇಲುತ್ತಾ ಬಾಲವನ್ನು ಬೀಸಣಿಗೆಯ ರೀತಿ ಬಿಚ್ಚಿ ತನ್ನ ಗತಿಯನ್ನು ನಿರಾಯಾಸವಾಗಿ ಬೇಕಾದ ಕಡೆ ಬದಲಿಸಿ ಬೇಟೆಗಾಗಿ ಹೊಂಚು ಹಾಕುವುದು ಸಾಮಾನ್ಯ ಡೇಗೆಯ ನೋಟ! ವಿಶೇಷವೆಂದರೆ ಸಾಮಾನ್ಯ ಡೇಗೆ ತನ್ನ ಕುತ್ತಿಗೆಯನ್ನು ಗೂಬೆಯಂತೆ ಸುತ್ತಲೂ ತಿರುಗಿಸಲು ಬಲ್ಲದು. ಅದರಿಂದಾಗಿ ಬೇಟೆ ಯಾವ ದಿಕ್ಕಿನಲ್ಲಿದ್ದರೂ ಅದರ ತೀಕ್ಷ್ಣ ದೃಷ್ಟಿಯಿಂದ ತಪ್ಪಿಸಿಕೊಳ್ಳಲು ಸಾಧ್ಯವಿಲ್ಲ! ಹಾಗೆಯೇ ರೆಕ್ಕೆಯನ್ನು ಮುಕ್ಕಾಲು ಮಡಚಿ ಕಲ್ಲಿನ ತರಹ ಕೆಳಗೆ ಧುಮುಕಿ ಕ್ಷಣಮಾತ್ರದಲ್ಲಿ ಕಾಲಿನ ಬಲವಾದ ಉಗುರಿನಿಂದ ಕಪ್ಪಿಹಿಡಿದು ಹತ್ತಿರದ ಮರದ ಮೇಲೆ ಕುಳಿತು ಸುತ್ತೆಲ್ಲಾ ವಾತಾವರಣದಲ್ಲಿ ಕುತ್ತಿಗೆ ತಿರುಗಿಸಿ ವೀಕ್ಷಿಸುತ್ತಾ ಹರಿತವಾದ ಕೊಕ್ಕಿನ ತುದಿಯಿಂದ ಬಗೆದು, ಎಳೆದು ತಿನ್ನುವುದು. ಹೊಟ್ಟೆ ತುಂಬಿದ ನಂತರ ಉಳಿದ ಶೇಷವನ್ನು ಅಲ್ಲಿಯೇ ಬಿಸಾಕಿ ಹಾರಿ ಹೋಗುವುವು. ನಾವು ಈ ದೃಶ್ಯ ಕಾಣುವುದು ಚಳಿಗಾಲದಲ್ಲಿ ಮಾತ್ರ. ಹಿಮಾಲಯದ ತಪ್ಪಲಿನಿಂದ ನಮ್ಮಲ್ಲಿಗೆ ಚಳಿಗಾಲದಲ್ಲಿ ಮರೆಯದೇ ಬರುವ ಅತಿಥಿಯಿದು.

ಸಾಮಾನ್ಯ ಡೇಗೆ ಎಲ್ಲಾ ಕಡೆಗೂ ಕಾಣುವ ಬೇಟೆಗಾರ ಪಕ್ಷಿ. ಪಾರಿವಾಳದ ಗಾತ್ರ, ಇಟ್ಟಿಗೆ ಕೆಂಪು ಬಣ್ಣದ ಮೇಲ್ಮೈ, ಅದರಲ್ಲಿ ತೊಟ್ಟಿಕ್ಕಿದಂತಿರುವ ಕಪ್ಪು ಚುಕ್ಕೆಗಳು, ನೀಲಿ ಬೂದು ತಲೆ, ಕಪ್ಪು ಮೀಸೆ, ಪೃಷ್ಠ ಮತ್ತು ನೀಲಿಬೂದು ಬಾಲ, ಅದರ ಅಂಚಿನಲ್ಲಿ ಕಪ್ಪುಪಟ್ಟೆ, ತುದಿಯಲ್ಲಿ ಬಿಳಿ. ರೆಕ್ಕೆಯ ಮೇಲೆ ಪ್ರಧಾನ ಗರಿ ಹಾಗೂ ಬುಡದ ಗರಿ ಕಪ್ಪು, ಗಲ್ಲ ಬಿಳಿ, ತಳಭಾಗ ಹಳದಿ ಬೂದು, ಅದರ ಮೇಲೆ ಕಪ್ಪು ಮಚ್ಚೆಗಳು ಮತ್ತು ಗೀರುಗಳು, ಬಾಲದ ಕೆಳಗಿನ ಗರಿಗಳ ಕಿರಿದಾದ ತುದಿಯ ಕಪ್ಪು ಪಟ್ಟಿ ಹಾರುವಾಗ ಎದ್ದು ಕಾಣುವುದು. ತುದಿ ಚೂಪಾದ ಬೂದು ಕೊಕ್ಕು, ಅದರ ಬುಡ ಹಳದಿ, ತುದಿ ಕಪ್ಪು. ಕಣ್ಣುಗಳು ದಟ್ಟಕಂದು. ಕಣ್ಣಿನ ಹಾಗೂ ಕೊಕ್ಕಿನ ಪಟ್ಟಿ ಮತ್ತು ಉಂಗುರ ಹಳದಿ. ಕಾಲು ಮತ್ತು ಪಾದ ಹೊಳೆಯುವ ಹಳದಿ.

# ನವಿಲು Peacock

ಚಂಡೆಯ ಲಯಬದ್ಧ ಬಡಿತದ ಯಕ್ಷಗಾನ ಹಿಮ್ಮೇಳದಲ್ಲಿ 'ನವಿಲು ಕುಣಿಯುತಿದೆ ನೋಡೆ' ಪದ್ಯ ಕೇಳುತ್ತಿದ್ದಂತೆಯೇ ಮೈ ನವಿರೇಳುವುದು! ಕೋಗಿಲೆ ಗಾಯನಕ್ಕೆ ಪ್ರಸಿದ್ಧಿಯಾದರೆ ನವಿಲು ನರ್ತನಕ್ಕೆ ಹೆಸರುವಾಸಿ!

ನವಿಲು ನಮ್ಮ ರಾಷ್ಟ್ರಪಕ್ಷಿ. ನಮ್ಮ ದೇಶದಲ್ಲಿ ಕಾಣುವ ನವಿಲುಗಳು ಅತ್ಯಂತ ವರ್ಣರಂಜಿತ ಹದ್ದಿನ ಗಾತ್ರದ ಪಕ್ಷಿ. ಉದ್ದ ರೆಕ್ಕೆಯೊಂದಿಗೆ ವೈಭವಯುತವಾಗಿ ಕಾಣುವುದು ಗಂಡು. ಜನಮನದಲ್ಲಿರುವ ಭಗವಂತ ಶ್ರೀಕೃಷ್ಣ ತನ್ನ ಶಿರದ ಮೇಲೆ ಧರಿಸಿರುವ ನವಿಲುಗರಿ ಅದರ ಹಿರಿಮೆಯನ್ನು ಹೆಚ್ಚಿಸಿದೆ. ಕೃಷ್ಣನ ಜನ್ಮಸ್ಥಾನ ಮಥುರಾದಲ್ಲಿ ಹೆಚ್ಚಾಗಿ ಕಾಣಿಸಿಕೊಳ್ಳುವುದು. ಹಾಗೆಯೇ ಷಣ್ಮುಖನ ವಾಹನವಾಗಿ ಬಳಸಿರುವುದು ಪೂಜನೀಯ ಭಾವನೆಯನ್ನು ಮೂಡಿಸಿದೆ.

ಇಂಗ್ಲಿಷಿನಲ್ಲಿ ಪಿಕಾಕ್ **(Peacock)** ಎಂದು ಗಂಡುಹೆಣ್ಣು ಎರಡಕ್ಕೂ ಸೇರಿ ಕರೆಯುವುದು ವಾಡಿಕೆ. ಆದರೆ ತಾಂತ್ರಿಕವಾಗಿ ಅದು ಗಂಡುಮಾತ್ರ, ಹೆಣ್ಣು ಪಿಹೆನ್ **(Peahen)**, ಎರಡೂ ಸೇರಿಸಿ ಹೇಳುವುದಾದರೆ ಪಿಫೌಲ್ **(Peafowl)** ಎಂದು ಕರೆಯುವುದು ಸಮಂಜಸವಾಗುವುದು.

ನವಿಲಿನ ತಲೆಯ ಪುಕ್ಕ ಗಿಡ್ಡ ಮತ್ತು ಗುಂಗುರು ವಿನ್ಯಾಸ ಹೊಂದಿರುವುದು. ಲೋಹದ ನೀಲಿ ತಲೆ ಮತ್ತು ಉಳಿದ ಭಾಗ ಹಸಿರು, ತಲೆಯ ಮೇಲಿನ ಬೀಸಣಿಕೆ, ಬಾಲದ ತುದಿ ಜುಟ್ಟು. ಕುತ್ತಿಗೆ ಹೊಳೆಯುವ ನೀಲಿ. ದೇಹದ ಮೇಲ್ಮೈ ಬಳಪದ ಹಸಿರು, ತಳಭಾಗ ಹಸಿರು, ಬಾಲದ ಮೇಲೆ ಬೂದು, ಉದ್ದ ಬಾಲದ ಗರಿ ಅದರ ನಿಜವಾದ ವೈಭವ! ಪ್ರತಿಯೊಂದು ಗರಿಯ ತುದಿಯಲ್ಲಿ ಅರ್ಧಚಂದ್ರಾಕೃತಿಯ ಕಣ್ಣು. ನವಿಲು ತನ್ನ ಗರಿಯನ್ನು ನಾಟ್ಯಭಂಗಿಯಲ್ಲಿ ಮೇಲೆತ್ತಿದಾಗ ಸಹಸ್ರ ಕಣ್ಣುಗಳು ಏಕಕಾಲದಲ್ಲಿ ತೆರೆದಂತೆ ಗೋಚರಿಸುವುದು. ಅದರಿಂದಲೇ ಸಂಸ್ಕೃತ



ಪ್ರಪಂಚದಾದ್ಯಂತ ಕಾಣುವ ಪಕ್ಷಿ. ಈ ಬಳಗದಲ್ಲಿ ಸುಮಾರು ಐವತ್ತೊಂಬತ್ತು ಪ್ರಧಾನ ಜಾತಿ ಮತ್ತು ಇನ್ನೂರಾ ಅರವತ್ತೆಂಟು ಉಪಜಾತಿಯ ಗಿಳಿಗಳಿವೆ. ಕೊಕ್ಕೆಯಂತೆ ಮುಂದಕ್ಕೆ ಬಾಗಿದ ಕೊಕ್ಕು, ಗಿಡ್ಡ ಕಾಲುಗಳು ಪ್ರಧಾನ ಲಕ್ಷಣ. ಅದರಲ್ಲಿ ಹಲವು ವಿಧದ ರಂಗು–ರಂಗಿನ ಬಣ್ಣದ ಗಿಳಿಗಳು ಕಾಣಲು ಸಿಗುತ್ತವೆ. ಜಗತ್ತಿನಲ್ಲಿ ಕಾಣುವ ಎಲ್ಲಾ ಬಣ್ಣಗಳನ್ನೂ ಗಿಳಿಗಳಲ್ಲಿ ನೋಡಬಹುದು!

ನಮ್ಮ ದೇಶದಲ್ಲಿ ಆರು–ಏಳು ಜಾತಿಯ ಗಿಳಿಗಳಿವೆ. ಅವುಗಳಲ್ಲಿ ಪ್ರಧಾನವಾಗಿ ಕಾಣುವುದು ರಾಮಗಿಳಿ, ಇದು ದೊಡ್ಡದು. ಅತೀ ಚಿಕ್ಕದೆಂದರೆ ಬಾಳೇಮೂತಿ ಗಿಳಿ. ನಮ್ಮ ಇತಿಹಾಸಕ್ಕೂ ಗಿಳಿಗೂ ಅವಿನಾಭಾವ ಸಂಬಂಧವಿದೆ. ಶಕುನ ಹೇಳುವ ಹಕ್ಕಿಯೆಂದೇ ಪ್ರಸಿದ್ಧಿ ಪಡೆದಿರುವುದು. ಕಾಡುಗಳಲ್ಲಿಯೂ ವಿಪುಲವಾಗಿದೆ. ಹಾಗೆಯೇ ಊರು, ಹೊಲಗದ್ದೆ, ಹಣ್ಣಿನ ತೋಪುಗಳಿಗೆ ಹಿಂಡುಗಟ್ಟಲೆ ನುಗ್ಗಿ ನಾಶಗೊಳಿಸುವುದೂ ಇದೇ ಸರಿ. ಕೊಕ್ಕು ರಕ್ತಕೆಂಪು. ಬಲಿಷ್ಠ ಮೇಲ್ದವಡೆ ಕೊಂಗತ್ತಿಯಂತೆ ತುದಿ ಕೆಳಕ್ಕೆ ಬಾಗಿರುವುದು. ಮೈ ಸಂಪೂರ್ಣ ದಟ್ಟ ಎಲೆಹಸಿರು ಹಳದಿ ಮಿಶ್ರಿತ ಬಣ್ಣ, ನೀಲಿ ಮಿಶ್ರಿತ ಉದ್ದ ಬಾಲದ ಪುಕ್ಕ. ಗಂಡಿಗೆ ಕುತ್ತಿಗೆಯಲ್ಲಿ ಗುಲಾಬಿ ಮತ್ತು ಕಪ್ಪು ಬಣ್ಣದ ಉಂಗುರ ಎದ್ದು ಕಾಣುವುದು. ರೆಕ್ಕೆಯ ಭುಜದ ಮೇಲೆ ಕೆಂಪುಪಟ್ಟಿ. ಹೆಣ್ಣಿಗೆ ಕುತ್ತಿಗೆಯಲ್ಲಿ ಗುಲಾಬಿ ಮತ್ತು ಕಪ್ಪುಬಣ್ಣದ ಪಟ್ಟಿ ಇರುವುದಿಲ್ಲ. ಇದರಿಂದ ಪ್ರತ್ಯೇಕಿಸಿ ಗುರುತಿಸುವುದು ಸುಲಭ.

## ಗುಲಾಬಿ ಕೊರಳಿನ ಗಿಳಿ Rose ringed Parakeet



ಗುಲಾಬಿ ಕುತ್ತಿಗೆಯ ಗಿಳಿ ಸಪುರ, ರಾಮಗಿಳಿಗಿಂತಲೂ ಸ್ವಲ್ಪ ಚಿಕ್ಕದು. ಮೊದಲ ನೋಟಕ್ಕೆ ಎರಡೂ ಒಂದೇರೀತಿ ಕಂಡರೂ ಪರಾಂಬರಿಸಿದಾಗ ವ್ಯತ್ಯಾಸ ತಿಳಿಯುವುದು. ಕೂಗುವುದರಲ್ಲಿ ಒಂದೇರೀತಿ ಇದ್ದರೂ ಗುಲಾಬಿ ಕುತ್ತಿಗೆಯ ಗಿಳಿಯ ಧ್ವನಿ ಅದಕ್ಕಿಂತಲೂ ಸ್ವಲ್ಪ ಚಿಕ್ಕದು. ಪ್ರಕೃತಿಯಲ್ಲಿ ಸ್ವತಂತ್ರವಾಗಿ ಓಡಾಡುವಾಗ ಹೊಳಪು ಹಸಿರಿನಿಂದ ಕಂಗೊಳಿಸುವುದು. ಅದರ ಮುಖ ಹೊಟ್ಟೆ ಮತ್ತು ರೆಕ್ಕೆಯ ಕೆಳಭಾಗಗಳು ಹಳದಿ ಮಿಶ್ರಿತ ಹಸಿರು. ಆಕರ್ಷಣೀಯವಾದ ಕಣ್ಣು. ತಲೆಯ ಹಿಂದೆ ಮತ್ತು ಮೇಲೆ ಎಲ್ಲಾ ನೀಲಿಯಿಂದ ತೊಳೆದಂತೆ ಕಾಣುವುದು. ಅವಕ್ಕೆ ಕುತ್ತಿಗೆಯ ಗದ್ದ ದಪ್ಪ, ಚಕ್ಕುಗಳಲ್ಲಿ ಚಿಕ್ಕ ಕಪ್ಪುಗೆರೆ ಅದರ ಬದಿಯಲ್ಲಿರುವುದು. ಅವುಗಳ ಬಾಲದ ಒಳಮಧ್ಯದ ರೆಕ್ಕೆಯಲ್ಲಿ ನೀಲಿ ಮತ್ತು ಹಳದಿ ಮಿಶ್ರಿತ ತುದಿ. ಅದರ ಹೊರಭಾಗ ಹಸಿರು. ಬಾಲದ ಹೊರಗಿನ ಒಳಭಾಗ ಎಣ್ಣೆ ಹಳದಿ, ಮಧ್ಯದ ಪುಕ್ಕ ಕಪ್ಪು. ಅದರ



## ನೀಲಕಂಠ Roller, Blue Jay

ನೀಲಕಂಠ ದಟ್ಟಕಾಡಿನಿಂದ ಸದಾ ದೂರ ಉಳಿಯುವ ಪಕ್ಷಿ. ಬಯಲು ಪ್ರದೇಶ, ಕುರುಚಲು ಕಾಡು, ಮಲೆನಾಡಿನ ಬೆಟ್ಟ ಗುಡ್ಡ, ಬಯಲು ಸೀಮೆಯ ಹೊಲಗಳ ಬಳಿ ತಿರುಗಾಡಿಕೊಂಡಿರುವುದು. ಟೆಲಿಫೋನ್ ಲೈನು ಮತ್ತು ಜನವಸತಿ ಹತ್ತಿರವಿರುವ ಬೋಳು ಮರದ ಮೇಲೆ ಸುತ್ತಲೂ ವಾತಾವರಣ ಕಾಣುವ ತಾಣದಲ್ಲಿ ಒಂಟಿಯಾಗಿ ಕುಳಿತುಕೊಳ್ಳುವುದು ಸಾಮಾನ್ಯ. ಕಣ್ಣಿಗೆ ಕಟ್ಟುವ ಆಕ್ಸ್‌ಫರ್ಡ್ ಮತ್ತು ಕೇಂಬ್ರಿಡ್ಜ್ ಬಣ್ಣದ ನೀಲಿಹಕ್ಕಿ ಗಾತ್ರದಲ್ಲಿ ಪಾರಿವಾಳದಷ್ಟಿರಬಹುದು. ಪಾರಿವಾಳಕ್ಕಿಂತ ದೊಡ್ಡ ಮಂಡೆ, ಗಿಡ್ಡ ಕುತ್ತಿಗೆ, ಕಪ್ಪು ಕಣ್ಣು. ಅದರ ತಲೆ, ಕೆಳಗಿನ ರೆಕ್ಕೆ ಮತ್ತು ಬಾಲ ದಟ್ಟ ನೀಲಿಹಸಿರು. ಕುತ್ತಿಗೆ ಮತ್ತು ಗಂಟಲು ಬಿಳಿಮುಡಿ ಗೋಧಿಬಣ್ಣ. ಅದರ ಮೇಲೆ ಬಿಳಿ ಕೋಲುಗೆರೆ. ಕಣ್ಣಿನ ಸುತ್ತ ಬೋಳು ಮಾಸಲು ಕಂದುಹಳದಿ, ದಪ್ಪ ಕಾಗೆ ನಮೂನೆ ಗಟ್ಟಿ ಕಪ್ಪು ಕೊಕ್ಕು. ಎದೆ ಕೆಂಗಂದು. ಹೊಟ್ಟೆ ಹಾಗೂ ಬಾಲದ ತಳಭಾಗ ತಿಳಿನೀಲಿ. ಆದರೆ ಹಾರುವಾಗ ಮಾತ್ರ ರೆಕ್ಕೆಗಳ ನೀಲಿಬಣ್ಣದ ಪಟ್ಟಿಗಳು ವರ್ಣರಂಜಿತ ಬಣ್ಣದಿಂದ ಅತ್ಯಂತ ಆಕರ್ಷಕವಾಗಿ ಎದ್ದು ಕಾಣುವುದು. ನೋಡಲು ಹಾಗೂ ಆಕಾರದಲ್ಲಿ ಗಂಡು ಮತ್ತು ಹೆಣ್ಣುಗಳಲ್ಲಿ ವ್ಯತ್ಯಾಸವಿಲ್ಲ.

ಪಕ್ಷಿಶಾಸ್ತ್ರದ ವರ್ಗೀಕರಣದ ಪ್ರಕಾರ ಇವುಗಳು *ಕೊರ್ಯಾಸಿಡೇ (coracidae)* ಕುಟುಂಬಕ್ಕೆ ಸೇರುತ್ತವೆ. ಈ ಪಕ್ಷಿಗೆ ಇಂಗ್ಲಿಷಿನಲ್ಲಿ **Rollar Bluejay** ಎನ್ನುವರು. ಕನ್ನಡದಲ್ಲಿ ದಾಸಮಗರೆ, ಹಾಲಕ್ಕಿ, ಉರುಳಿಗ ಮತ್ತು ನೀಲಕಂಠ. ಕರ್ನಾಟಕ ರಾಜ್ಯಪಕ್ಷಿ ನೀಲಕಂಠ ಎಂದು ಬಹಳ ಜನರಿಗೆ ಗೊತ್ತಿಲ್ಲ. ಅದೇ ರೀತಿ ಆಂಧ್ರಪ್ರದೇಶ, ಬಿಹಾರ ಮತ್ತು ಒರಿಸ್ಸಾ ರಾಜ್ಯಗಳ ರಾಜ್ಯಪಕ್ಷಿ ಸಹಾ ಹೌದು. ನಮ್ಮ ದೇಶದಲ್ಲಿ ನವಿಲಿನ ನಂತರ ಸುಂದರವಾಗಿ ಕಾಣುವ ಪಕ್ಷಿ. ಶಿವನಿಗೆ ನೀಲಕಂಠ ಎನ್ನುವರು. ಮೂಲತಃ ಇದು ಸಂಸ್ಕೃತ ಶಬ್ದ. ಆತ ಹಾಲಾಹಲ ವಿಷವನ್ನು ಕುಡಿದಾಗ ಅದನ್ನು ಕುತ್ತಿಗೆಯಲ್ಲಿ ಹಿಡಿದು



## ಚಂದ್ರಮುಕುಟ ಹಕ್ಕಿ Hoopoe

ಈ ಪಕ್ಷಿ ಉದ್ರೇಕಗೊಂಡಾಗ ತಲೆಯ ಮೇಲಿರುವ ಜುಟ್ಟು ನಿಮಿರಿ ಹರಡಿ ಬೀಸಣಿಕೆ ಕಿರೀಟ ಕಂಗೊಳಿಸುವುದು. ಅದರಿಂದ ಚಂದ್ರಮುಕುಟವೆಂದು, ತುದಿ ಚೂಪಾದ ಸಪುರ ಉದ್ದ ಕೊಕ್ಕಿನಿಂದ ಯಾವಾಗಲೂ ನೆಲ ಕುಕ್ಕುತ್ತಾ, ಆಹಾರ ಅರಸುವ ಅಭ್ಯಾಸದಿಂದ ನೆಲಕುಟುಕವೆಂದು, ಕೂಗು ಸ್ವಲ್ಪ ಕೂ.. ಕೂ. ನಮೂನೆ ಕೇಳುವುದರಿಂದ  ಕೂಕೂ  ಹಕ್ಕಿ ಎಂಬ ಹೆಸರೂ ಚಾಲ್ತಿಯಲ್ಲಿರುವುದು. ಅದರ ಕೂಗಿಗೆ ಅನ್ವರ್ಥವಾಗಿ ಇಂಗ್ಲಿಷ್‌ನಲ್ಲಿ ಹೂಪೋ ಎಂದು ನಾಮಕರಣ ಮಾಡಿರುವರು. ಇದು ಇಸ್ರೇಲ್‌ದೇಶದ ರಾಷ್ಟ್ರೀಯ ಪಕ್ಷಿ. ಹಲವು ಪಕ್ಷಿಗಳನ್ನು ಮತಗಳಿಂದ ಸೋಲಿಸಿ ಈ ಸ್ಥಾನವನ್ನು ಅಲಂಕರಿಸಿರುವುದು! ನೋಡಲು ಮೃದುವಾಗಿ ಕಂಡರೂ ಧೈರ್ಯಶಾಲಿ ಮತ್ತು ಕೆಚ್ಚೆದೆಯ ಪಕ್ಷಿ ಎಂಬ ಹೆಗ್ಗಳಿಕೆಯೊಡನೆ ಇಸ್ರೇಲೀ ಜನಮನವನ್ನು ಹೂಪೋ ಗೆದ್ದಿರುವುದು. ಪಕ್ಷಿಶಾಸ್ತ್ರದ ವರ್ಗೀಕರಣದಲ್ಲಿ ಇದು ಉಪುಪಿಡೇ ಕುಟುಂಬದ ಏಕಮೇವ ಪ್ರತಿನಿಧಿ.

## ಭಾರತದ ಮಟ್ಟಿನೆಲಗುಬಿ/ಕೆಂಪು ರೆಕ್ಕೆಯ ನೆಲಗುಬ್ಬಿ Indian Bushlark(Mirafra erythroptera)




ಗಾತ್ರದಲ್ಲಿ ಗುಬ್ಬಚ್ಚಿಯಷ್ಟು, ಆದರೆ ಉದ್ದವಾಗಿರುವುದು. ಮೈಬಣ್ಣ ಸಂಪೂರ್ಣ ಮಾಸಿದ ಕಂದು ಮತ್ತು ಕಪ್ಪು ಗೆರೆ. ಕೆನ್ನೆಯ ಮೇಲೆ ಮಾಸಿದ ಬಿಳೀಮಚ್ಚೆ, ಅದು ಕಣ್ಣುಗುಡ್ಡೆಯ ಮೇಲಂಚಿನವರೆಗೂ ಇರುವುದು. ತಲೆ ಮತ್ತು ಮೆಲ್ಮೈ ಜಾಸ್ತಿ. ತಳಭಾಗ ಮಾಸಿದ ಕಂದು, ಎದೆಯ ಮೇಲೆ ದೊಡ್ಡ–ದೊಡ್ಡ ಕಪ್ಪುಚುಕ್ಕೆ. ಹಾಗೆಯೇ ರೆಕ್ಕೆಗರಿ ಮಧ್ಯ ಮಾಸಿರುವುದು ಮತ್ತು ಪ್ರಧಾನ ಗರಿ ಕಂದುಬಣ್ಣ. ಗಂಡು ಹೆಣ್ಣುಗಳಲ್ಲಿ ವ್ಯತ್ಯಾಸವಿಲ್ಲ. ಇದನ್ನು ಬಹಳವಾಗಿ ಜರ್ಡನ್ಸ್ ಮಟ್ಟಿನೆಲಗುಬ್ಬಿ ಎಂದು ತಪ್ಪಾಗಿ ಗ್ರಹಿಸುತ್ತಾರೆ. ಆದರೆ ಜರ್ಡನ್ಸ್ ಮಟ್ಟಿನೆಲಗುಬ್ಬಿಗೆ ಕಪ್ಪುಬಣ್ಣ ಹಾಗೂ ಕಂದುಬಣ್ಣ ಇದಕ್ಕಿಂತ ದಟ್ಟವಾಗಿರುವುದು. ಕೊಕ್ಕು ಗಿಡ್ಡ, ಕಾಲು, ಬಾಲ ಅದಕ್ಕಿಂತ ಉದ್ದ. ಇದು ಹಾಡುವಾಗ ಮಟ್ಟಿಯ ತುದಿಯಲ್ಲಿರುವುದು. ಮರದ ಮೇಲೆ ಮತ್ತು ತಂತಿಯ ಮೇಲೆ ಕೂರುವುದಿಲ್ಲ. ಆದರೆ ಕೂಗು ಜರ್ಡನ್ಸ್ ಮಟ್ಟಿನೆಲಗುಬ್ಬಿಯಂತೆ ಧ್ವನಿ ಕೆಳಮಟ್ಟದಲ್ಲಿದ್ದು ಜಾಸ್ತಿ ಹೊತ್ತು ನಡುಗಿಸುವ ಕಂಪನವಿರುವುದು.

## ಜರ್ಡನ್ಸ್ ಮಟ್ಟಿನೆಲಗುಬ್ಬಿ / ಕಂದುರೆಕ್ಕೆಯ ನೆಲಗುಬ್ಬಿ Jerden's Bushlark (Mirafra affinis)



ಭಾರತದ ಮಟ್ಟಿನೆಲಗುಬ್ಬಿಯ ರೀತಿಯಲ್ಲಿಯೇ ನೋಡಲು ಕಾಣುವುದು. ಆದರೆ ಅದಕ್ಕಿಂತ ಬಲಿಷ್ಠ, ಎದೆಯ ಮೇಲಿನ ಚುಕ್ಕೆ ಬಾಣದ ರೀತಿ ತಲೆಯ ಕಡೆ ಮುಖವಾಗಿರುವಂತೆ ಕಾಣುವುದು. ಇವುಗಳು ಒಂಟಿಯಾಗಿ, ಜೋಡಿಯಾಗಿಯೂ ಮತ್ತು ಚಿಕ್ಕ ಚಿಕ್ಕ ಚದುರಿದ ಗುಂಪಾಗಿ ಓಡಾಡುವುದು. ಹೆಚ್ಚಾಗಿ ಮರ–ಮಟ್ಟಿಗಳಿರುವ ಹೊರಾಂಗಣವನ್ನು ಬಯಸುತ್ತವೆ. ಕಾಡಿನ ತಪ್ಪಲಿನಲ್ಲಿ ಕಾಣಿಸಿಕೊಳ್ಳುವುದು. ಮರದ ಮೇಲೆ ಮತ್ತು ವಿದ್ಯುತ್ ತಂತಿಗಳ ಮೇಲೂ ಕುಳಿತಿರುವುದು ಸಾಮಾನ್ಯ. ಗಂಡು ಹೆಣ್ಣುಗಳಲ್ಲಿ ವ್ಯತ್ಯಾಸವಿಲ್ಲ. ಆಹಾರ ಕ್ರಮದಲ್ಲಿ ಕಾಳುಕಡಿ ಮತ್ತು ಹುಳು–ಹುಪ್ಪಟೆ ತಿನ್ನುತ್ತವೆ. ಸಾಮಾನ್ಯವಾಗಿ ಕೂಗುವುದು ಚಿಪ್– ಚಿಪ್– ಚಿಪ್– ಚಿಪ್ ಎಂದು.

## ಹಾಡುವ ಮಟ್ಟಿನೆಲಗುಬ್ಬಿ Singing Bushlark (Mirafra cantillans)



ಲಾರ್ಕ್ ಬಳಗದಲ್ಲಿ ಇದು ಪ್ರಪಂಚದಾದ್ಯಂತ ಹರಡಿದ್ದರೂ ಕರ್ನಾಟಕದಲ್ಲಿ ಕಾಣಿಸಿಕೊಳ್ಳುವುದು ಅಪರೂಪ. ಉಳಿದ ಎರಡು ಪ್ರಭೇದದ ಮಟ್ಟಿನೆಲಗುಬ್ಬಿಗಳಿಗಿಂತ ಕೊಕ್ಕು ಚಿಕ್ಕದು, ಎದೆಯ ಮೇಲಿನ ಚುಕ್ಕೆ ಕಡಿಮೆ, ರೆಕ್ಕೆಯ ಕಂದೂ ಕಡಿಮೆ ಮತ್ತು ಹೊರಗಿನ ಬಾಲದ ಗರಿ ಬಿಳಿ. ಮಾಸಿದ ಕಂದು ಬಣ್ಣದ ಕಣ್ಣು ಹುಬ್ಬು ಎದ್ದು ಕಾಣುವುದು ಮತ್ತು ಎರಡೂ ಕೆನ್ನೆಯ ಕೆಳಗೂ ಹರಡಿರುವುದು. ಗಂಡು ಹೆಣ್ಣುಗಳಲ್ಲಿ ವ್ಯತ್ಯಾಸವಿಲ್ಲ. ಇದು ಬಯಲು ಪ್ರದೇಶ ಖಾಲಿಯಿರುವ ಹೊರಾಂಗಣ, ಹುಲ್ಲುಗಾವಲುಗಳಲ್ಲಿ ಕಾಣುತ್ತವೆ. ಹಾಡುಗಾರಿಕೆಯಲ್ಲಿ ನಿಸ್ಸೀಮ.

ಕಾಣುತ್ತೇವೆ. ಅವು ಕೊಂಬೆಯಿಂದ ಕೊಂಬೆಗೆ ಹಾರುತ್ತಾ ಜೋಡಿಯ ಮೇಲೆ ತಿರುಗಾಡುವ ಹಕ್ಕಿಗಳು. ಉಳಿದ ಹಕ್ಕಿಗಳಿಗೆ ಹೋಲಿಸಿದರೆ ಇವುಗಳ ಸಂಖ್ಯೆ ಜಾಸ್ತಿ. ನಮ್ಮ ಸುತ್ತಲೂ ಹೆಚ್ಚು ಕಾಣುವುದು ಕೆಂಪು ಗಲ್ಲದ ಜುಟ್ಟಿಗ (Red Whiskered Bulbul) ಮತ್ತು ಕೆಂಪು ಬಾಲದ ಜುಟ್ಟಿಗ (Red Vented Bulbul). ಗಾತ್ರದಲ್ಲಿ ಗುಬ್ಬಚ್ಚಿಗಿಂತ ದೊಡ್ಡದಾಗಿದ್ದು ಮೈನಾಹಕ್ಕಿಗಿಂತ ಚಿಕ್ಕದಾಗಿರುವುದು.



## ಕೆಂಪು ಗಲ್ಲದ ಜುಟ್ಟಿಗ / ಕೆಮ್ಮೀಸೆ ಪಿಕಳಾರ Red - whiske Red Bulbul

ಕುತ್ತಿಗೆ ಮತ್ತು ಎದೆ ಬಿಳಿ ಬಣ್ಣ, ಕಣ್ಣಿನ ಕೆಳಗೆ ಗಲ್ಲ ರಕ್ತಕೆಂಪು ಮಚ್ಚೆ, ಅದರ ಕೆಳಗೆ ಬಿಳೀ ಮಚ್ಚೆ ಇರುವುದು. ಎದೆಯ ಮೇಲೆ ತುಂಡಾದ ಕಪ್ಪು ಕಂಠಹಾರ, ತಲೆಯ ಮೇಲೆ ಸ್ವಲ್ಪ ಮುಂದೆ ಬಾಗಿರುವ ಕಪ್ಪು ಜುಟ್ಟು. ಬಾಲದ ಕೆಳಭಾಗದ ಬುಡದಲ್ಲಿ ರಕ್ತ ಮೆತ್ತಿಕೊಂಡಿರುವಂತೆ ಕಾಣುವುದು. ಮರದ ಮೇಲೆ ಕುಳಿತಾಗ ಕೆಳಗಿನಿಂದ ನೋಡಿದರೆ ಗಾಯವಾಗಿರುವ ಹಾಗೆ ಭಾಸವಾಗುವುದು. ರೆಕ್ಕೆ ಮತ್ತು ಬಾಲ ಕಂದುಬಣ್ಣ, ಬಾಲದ ತುದಿ ಬಿಳಿ. ಆದರೆ ಕೆಲವು ಉಪಜಾತಿಯವುಗಳಿಗೆ ಬಾಲದ ತುದಿ ಬಿಳಿಯಾಗಿರುವುದಿಲ್ಲ. ಹಾರುವಾಗ ಎಲ್ಲಾ ಬಣ್ಣಗಳ ಮಾಸಲು ಸಮ್ಮಿಶ್ರ ರೂಪದಲ್ಲಿ ಕಾಣುವುದು. ಸಪೂರವಾಗಿ ಕೆಳಮುಖ ಬಾಗಿರುವ ಕಪ್ಪು ಕೊಕ್ಕು. ಅದರ ಬುಡದಲ್ಲಿ ಒರಟು ಮೀಸೆಯಂತಹ ಕೂದಲು, ಕಾಲುಗಳು ಕಪ್ಪು. ಗಂಡು ಹೆಣ್ಣುಗಳಲ್ಲಿ ಯಾವುದೇ ವ್ಯತ್ಯಾಸವಿಲ್ಲ.



## ಕೆಂಪು ಬಾಲದ ಜುಟ್ಟಿಗ / ಕೆಂಪುಕಿಬ್ಬೊಟ್ಟೆಯ ಪಿಕಳಾರ

Red - vented Bulbul

ಇದರಷ್ಟೇ ಗಾತ್ರವಿರುವುದು. ಮಣ್ಣುಕಂದು ಬಣ್ಣದ ಹಕ್ಕಿ. ತುಸು ಗಡ್ಡದ ನಮೂನೆ ಕಪ್ಪು ತಲೆ. ಕಪ್ಪು ಕುತ್ತಿಗೆ, ಬೆನ್ನು ಹಾಗೂ ಎದೆಯ ಮೇಲೆ ಹೊರಪೆ ವಿನ್ಯಾಸದ ಗುರುತು ಕಾಣುತ್ತದೆ. ಬಿಳೀ ಪೃಷ್ಠ, ಬಾಲದ ಪುಕ್ಕದ ಬುಡದಲ್ಲಿ ಕಡುಗೆಂಪು, ಕಪ್ಪುಬಾಲದ ತುದಿಯಲ್ಲಿ ಬಿಳಿ. ಹಾರುವಾಗ ಅದು ಎದ್ದು ಕಾಣುವುದು. ಸಪೂರವಾದ, ಕೆಳಮುಖ ಬಾಗಿರುವ ಕಪ್ಪುಬಣ್ಣದ ಕೊಕ್ಕು, ಕಾಲುಗಳೂ ಸಹ ಕಪ್ಪು. ಗಂಡು ಹೆಣ್ಣುಗಳಲ್ಲಿ ಯಾವುದೇ ವ್ಯತ್ಯಾಸವಿಲ್ಲ. ಇವೆರಡೂ ಸ್ಥಳೀಯ ಹಕ್ಕಿಗಳು. ಕುರುಚಲು ಕಾಡು ಇದಕ್ಕೆ ಇಷ್ಟವಾದ ತಾಣ. ಮನೆಗಳ ಹತ್ತಿರ ಹಾಗೂ ಉದ್ಯಾನವನಗಳಲ್ಲಿ ತಿರುಗಾಡಿಕೊಂಡಿರುವುದು. ಕೆಂಪು ಗಲ್ಲದ ಜುಟ್ಟಿಗಗಳಿಗೆ ಹೋಲಿಸಿದರೆ ಗಲಾಟೆ ಮತ್ತು ಜಗಳಗಂಟತನ ಕಡಿಮೆ.

ಸಂಗೀತಕ್ಕೆ ಹೆಸರುವಾಸಿಯಾದ ಜಾತಿಯ ಪಕ್ಷಿಗಳಿವು. ಹಾಗೆಯೇ ಸಂಘಜೀವಿಗಳೂ ಹೌದು. ಅವೆಲ್ಲವುಗಳೂ *(Pycnonotidae)* ಪಿಕ್ನೋನೋಟಿಡೀ ಕುಟುಂಬಕ್ಕೆ ಸೇರುತ್ತವೆ. ಅದರಲ್ಲಿ ನೂರಾಇಪ್ಪತ್ತು ಬಗೆಯ ವಿವಿಧ ಬಣ್ಣದ

## ಕೆನ್ನೀಲಿ ಪೃಷ್ಠದ ಸೂರಕ್ಕಿ Perple rumped Sun Bird



ದೇಹದ ಮೇಲ್ಮೈ ಲೋಹದ ಹೊಳಪಿನ ಹಸಿರು ಮತ್ತು ಹಿಂದುಗಡೆ ಕಡುಗೆಂಪು, ತಳಭಾಗ ಹೊಳೆಯುವ ಹಳದಿ, ಕೆನ್ನೀಲಿಬಣ್ಣದ ಪೃಷ್ಠ. ಎದೆ, ಹೊಟ್ಟೆ ಹಳದಿ, ತಲೆ ಹೊಳೆಯುವ ನೀಲಿ, ಬಾಲ ಹಾಗೂ ರೆಕ್ಕೆ ಹೊಳೆಯುವ ನೇರಲೆ, ಮಧ್ಯಮದಲ್ಲಿ ಉದ್ದವಿರುವ, ತುದಿ ಕಮಾನಿನಂತೆ ಬಾಗಿದ ಕೊಕ್ಕು ಮಕರಂದ ಹೀರಲು ಸಹಾಯಕ. ಒಳಗೆ ಬ್ರೆಷ್‌ನಂತಿರುವ ಕೊಳವೆಯಾಕಾರದ ನಾಲಿಗೆ. ಬಣ್ಣ ಮತ್ತು ಹೊಳಪು ಬೆದೆಕಾಲಕ್ಕೂ ಹಾಗೂ ಉಳಿದ ಕಾಲಕ್ಕೂ ಹೇಳುವಂತಹ ವ್ಯತ್ಯಾಸ ಕಾಣುವುದಿಲ್ಲ. ಹೆಣ್ಣುಹಕ್ಕಿ ಕೆನ್ನೀಲಿ ಸೂರಕ್ಕಿಯ ರೀತಿಯೇ ಇರುವುದು. ಆದರೆ ಗಲ್ಲ ಬೂದುಬಿಳಿ, ಉಳಿದ ತಳಭಾಗ ಹೊಳೆಯುವ ಹಳದಿ.

ಇವುಗಳು ಜೋಡಿಯಾಗಿ ತಿರುಗಾಡುವುದೇ ಜಾಸ್ತಿ. ವರ್ಷದ ಎಲ್ಲಾ ಕಾಲದಲ್ಲಿಯೂ ಮೊಟ್ಟೆಯಿಟ್ಟು ಮರಿಮಾಡುತ್ತವೆ. ಕೆಲವೊಮ್ಮೆ ವರ್ಷದಲ್ಲಿ ಎರಡು ಬಾರಿ ಮೊಟ್ಟೆಯಿಟ್ಟು ಮರಿ ಮಾಡುವುದೂ ಉಂಟು. ಗೂಡನ್ನು ಹೆಣ್ಣೊಂದೇ ಮರದ ನಾರಿನಿಂದ, ಜೇಡದ ಬಲೆಯಿಂದ ಕಟ್ಟುತ್ತದೆ. ಗೂಡಿನ ಹೊರಮೈಯನ್ನು ಮರದ ತೊಗಟೆ, ಹಾರುವ ಧಾನ್ಯ ಮತ್ತು ಉಳಿದ ಸಿಗುವ ಎಲ್ಲಾ ಅನುಕೂಲಕ್ಕೆ ತಕ್ಕದಾದ ಸಲಕರಣೆಗಳನ್ನು ಅಂಟಿಸಿ ಮಾಡುವುದು. ಸಪೂರ ಗಿಡದ ಹೆಣೆಯ ತುತ್ತತುದಿಗೆ ನೇತು ಹಾಕಿರುವುದು. ಗಾಳಿ ಬಂದಾಗ ಅದೂ ಸಹ ತೂರಾಡುತ್ತದೆ, ಆದರೆ ಬೀಳುವುದಿಲ್ಲ. ಬಾಗಿಲನ್ನು ಗಿಡದ ಎಲೆಗಳಿರುವ ಕಡೆಗೆ ಮಾಡುತ್ತವೆ. ಸಾಮಾನ್ಯವಾಗಿ ಎರಡು ಅಂಡಾಕಾರದ ಮಾಸಿದ ಹಸಿರು ಬಿಳಿ ಮೊಟ್ಟೆಗಳನ್ನಿಡುವುದು. ಅದರ ಅಗಲ ತುದಿಯಲ್ಲಿ ಚುಕ್ಕೆ ಮತ್ತು ಗೆರೆಗಳಿರುವುದು.

ಗಂಡು–ಹೆಣ್ಣು ಎರಡೂ ಹದಿನಾಲ್ಕರಿಂದ ಹದಿನಾರು ದಿವಸದವರೆಗೆ ಮೊಟ್ಟೆಗೆ ಕಾವು ಕೊಡುತ್ತವೆ. ಮೊಟ್ಟೆಯೊಡೆದು ಮರಿ ಹೊರಬಂದ ನಂತರ ಹದಿನೇಳು ದಿವಸದಲ್ಲಿಯೇ ಸ್ವತಂತ್ರವಾಗಿ ಗೂಡುಬಿಟ್ಟು ಹಾರುತ್ತವೆ. ಆದರೂ ಕೆಲವು ದಿವಸದವರೆಗೆ ಆಹಾರವನ್ನು ತಂದುಕೊಡುತ್ತವೆ.



## ಹಿಂಬದಿ ಹಳದಿಬಣ್ಣ ಹೊಂದಿದ ಸೂರಕ್ಕಿ

### Yellow backed Sun Bird

ಈ ಹಳದಿಬಣ್ಣ ಹೊಂದಿದ ಸೂರಕ್ಕಿ ಅತ್ಯಂತ ಸುಂದರ ಪುಟ್ಟ ಹಕ್ಕಿ. ಸುಮಾರು ಹನ್ನೆರಡು ಇಂಚು ಉದ್ದವಿರುವುದು. ಗಂಡು ಮತ್ತು ಹೆಣ್ಣಿನ ಬೆನ್ನಿನ ಮೇಲೆ ದಟ್ಟನೇರಲೇಬಣ್ಣ. ಕೆಳಗಡೆ ಹೊಳೆಯುವ ಹಳದಿಬಣ್ಣ ಎದ್ದು ಕಾಣುವುದು, ಹಿಂದುಗಡೆ ಕಂದುನೇರಲೇ ಬಣ್ಣ, ಆದರೆ ಗಂಡು ಹಕ್ಕಿಗೆ ಇದರ ಜೊತೆಗೆ ದಟ್ಟನೀಲಿಬಣ್ಣ ಕುತ್ತಿಗೆ ಮತ್ತು ಎದೆಭಾಗದಲ್ಲಿ ಇರುವುದು. ಸಪೂರ ಮತ್ತು ತುದಿ ಕೆಳಕ್ಕೆ ಬಾಗಿರುವ ಕೊಕ್ಕು. ಅವುಗಳ ರೆಕ್ಕೆ

# ಪಕ್ಷಿಗಳ ಕನ್ನಡ, ಇಂಗ್ಲಿಷ್, ವೈಜ್ಞಾನಿಕ ಹೆಸರುಗಳ ಸೂಚಿ

ಈ ಪುಸ್ತಕದಲ್ಲಿ ವಿವರಿಸಲಾಗಿರುವ ಪಕ್ಷಿಗಳ ಕನ್ನಡ, ಇಂಗ್ಲಿಷ್ ಹಾಗೂ ವೈಜ್ಞಾನಿಕ ಹೆಸರುಗಳನ್ನು ಇಲ್ಲಿ ಕೊಡಲಾಗಿದೆ. ಇದು ಓದುಗರಿಗೆ ಹೆಚ್ಚಿನ ಸಹಾಯವಾಗಲಿ ಎಂಬುದು ನಮ್ಮ ಆಶಯ.

ಹಕ್ಕಿಗಳ ಹೆಸರುಗಳನ್ನು ಪಟ್ಟಿಮಾಡುವಾಗ ಒಂದು ವೈಜ್ಞಾನಿಕ ಕ್ರಮವನ್ನು ಅನುಸರಿಸಲಾಗುತ್ತದೆ. ಅದೆಂದರೆ, ಪಕ್ಷಿಗಳು ವಿಕಾಸವಾದ ದಾರಿಯಲ್ಲಿಯೇ ಅವನ್ನು ನೀಡಲಾಗುತ್ತದೆ. ಅಂದರೆ ಗುಳುಮುಳುಕ ಈ ಹಿನ್ನೆಲೆಯಲ್ಲಿ ಬಹಳ ಹಿಂದಿನ ಹಕ್ಕಿಯಾದರೆ ಮುನಿಯಾ ಬಂಟಿಂಗ್‌ಗಳು ಈಚಿನವು.

ಇಲ್ಲಿ ಕನ್ನಡ – ಇಂಗ್ಲಿಷ್ – ವೈಜ್ಞಾನಿಕ ಈ ಮೂರೂ ಹೆಸರುಗಳ ಇತ್ತೀಚಿನ ಶಿಷ್ಟ ಹೆಸರುಗಳನ್ನು ನೀಡಲಾಗಿದೆ. ಆವರಣದಲ್ಲಿ ಸ್ಥಳೀಯ ಹೆಸರನ್ನು ನೀಡಲಾಗಿದೆ.

| ಕನ್ನಡ ಹೆಸರು<br>ಸ್ಥಳೀಯ/ಪ್ರಚಲಿತ | ಸಾಮಾನ್ಯ ಇಂಗ್ಲಿಷ್ ಹೆಸರು | ವೈಜ್ಞಾನಿಕ ಹೆಸರು | ಪುಟ<br>ಸಂ. |
|---|---|---|---|
| **1 Grebes ಗುಳುಮುಳುಕಗಳು** | | | |
| **Order: Podicipediformes** | | **Family: Podicipedidae** | |
| ಗುಳುಮುಳುಕ | Little Grebe | *Tachybaptus ruficollis* | 13 |
| **2 Pelicans ಹೆಜ್ಜಾರ್ಲೆಗಳು** | | | |
| **Order: Pelecaniformes** | | **Family: Pelecanidae** | |
| ಹೆಜ್ಜಾರ್ಲೆ<br>(ಬೂದು ಜೋಳಿಗೆ ಕೊಕ್ಕು) | Spot-billed Pelican | *Pelecanus philippensis* | 15 |
| **3 Cormorants ನೀರುಕಾಗೆಗಳು** | | | |
| **Order: Pelecaniformes** | | **Family: Phalacrocoracidae** | |
| ನೀರುಕಾಗೆ | Indian Cormorant | *Phalacrocorax fuscicollis* | 18 |
| ದೊಡ್ಡ ನೀರುಕಾಗೆ<br>(ಉದ್ದ ಕೊಕ್ಕಿನ ನೀರುಕಾಗೆ) | Great Cormorant | *Phalacrocorax carbo* | 19 |
| ಸಣ್ಣ ನೀರುಕಾಗೆ | Little Cormorant | *Microcorbo niger* | 17 |
| **4 Darters ಹಾವಕ್ಕಿಗಳು** | | | |
| **Order: Pelecaniformes** | | **Family: Anhingidae** | |
| . ಹಾವಕ್ಕಿ | Oriental Darter | *Anhinga melanogaster* | 20 |

| | | | |
|---|---|---|---|
| ಖಗರತ್ನ | Purple-rumped Sunbird | *Leptocoma zeylonica* | 228 |
| ಕೆಂಗಂದು ಎದೆಯ ಸೂರಕ್ಕಿ | Loten Sunbird | *Cinnyris lotenius* | 229 |
| ಬಾಳೇಗುಬ್ಬಿ | Little Spiderhunter | *Arachnothera longirostra* | 230 |

| 58 White-eyes ಬೆಳ್ಗಣ್ಣಗಳು | | | |
|---|---|---|---|
| **Order: Passeriformes** | | **Family: Zosteropidae** | |
| ಬಿಳೀಕಣ್ಣು | Oriental White Eye | *Zosterops palpebrosus* | 232 |

| 59 Weavers and allies ಗೀಜಗಗಳು | | | |
|---|---|---|---|
| **Order: Passeriformes** | | **Family: Ploceidae** | |
| ಗೀಜಗ | Baya Weaver Bird | *Ploceus philippinus* | 234 |

| 60 Waxbills and allies ರಾಟವಾಳಗಳು | | | |
|---|---|---|---|
| **Order: Passeriformes** | | **Family: Estrildidae** | |
| ಕಪ್ಪುರಾಟವಾಳ(ಗೀಜೀ ಹಕ್ಕಿ) | Black headed Munia | *Lonchura atricapilla* | 237 |
| ಚುಕ್ಕೆ ರಾಟವಾಳ (ಚುಕ್ಕೆ ಮುನಿಯಾ) | Scaly breasted Munia | *Lonchura punctulata* | 239 |
| ಬಿಳಿಬೆನ್ನಿನ ರಾಟವಾಳ (ಬಿಳಿ ಬೆನ್ನಿನ ಮುನಿಯಾ) | White rumped Munia | *Lonchura striata* | 240 |
| ಕೆಂಪು ರಾಟವಾಳ (ಕೆಂಪು ಮುನಿಯಾ) | Red Munia | *Amandava amandava* | 239 |
| ಹಸಿರು ರಾಟವಾಳ (ಹಸಿರು ಮುನಿಯಾ) | Green Munia | *Amandava Formosa* | 240 |

*IUCN STATUS COLOR CODING*

*Critically Endangered* *Near Threatened*
*Vulnerable* *Least Concerned*



ಶ್ರೀಯುತ ಶ್ರೀಧರ ಹುಮರಿಯವರು ತಮ್ಮ ಅನೇಕ ವರ್ಷಗಳ ಅಭ್ಯಾಸವನ್ನು, ಅನುಭವವನ್ನು ಮತ್ತು ಪಕ್ಷಿಗಳ ಕುರಿತಾದ ಜ್ಞಾನ, ವಿಜ್ಞಾನಗಳನ್ನು ಈ ಪುಸ್ತಕದ ಮೂಲಕ ಸೊಗಸಾಗಿ ಹಂಚಿಕೊಂಡಿದ್ದಾರೆ. ಇದೊಂದು ಪಕ್ಷಿವೀಕ್ಷಕರು, ಪಕ್ಷಿಗಳ ಫೋಟೋಗ್ರಫಿ ಆಸಕ್ತರಿಗೆ ಆಕರ ಗ್ರಂಥವೆನಿಸುವುದರಲ್ಲಿ ಅನುಮಾನವಿಲ್ಲ. ಈ ಪುಸ್ತಕದಲ್ಲಿ ಪಕ್ಷಿಗಳ ಪ್ರಭೇದದ ವೈಜ್ಞಾನಿಕ ವಿಂಗಡಣೆಯ ಮೂಲಕ ಪ್ರತಿ ಪ್ರಭೇದದ ಪಕ್ಷಿಗಳನ್ನು, ಹೆಚ್ಚು ಕಡಿಮೆ ಕರ್ನಾಟಕದಲ್ಲಿ ಕಾಣ ಸಿಗುವ ಎಲ್ಲಾ ಪಕ್ಷಿಗಳನ್ನೂ, ಬಹಳ ಸರಳವಾಗಿ ಮತ್ತು ಸುಂದರವಾಗಿ ವಿವರಿಸಿದ್ದಾರೆ. ಆಯಾಯ ಪಕ್ಷಿಗಳ ಗುರುತಿಸುವಿಕೆ, ಅವುಗಳ ಸ್ವರೂಪದ ವಿವರಣೆ, ಜೀವನ ಶೈಲಿ, ಕೂಗು, ವಾಸಸ್ಥಳದ ಮಾಹಿತಿ, ಆಹಾರ ಕ್ರಮ, ಗೂಡು ಕಟ್ಟುವಿಕೆ, ವಂಶಾಭಿವೃದ್ಧಿಯ ಕ್ರಮಗಳು, ಅವುಗಳಿಗಿರುವ ಆಪತ್ತು, ಎಲ್ಲದರ ವಿವರಣೆ ಸಂಕ್ಷಿಪ್ತವಾಗಿಯೂ, ಸಂಪೂರ್ಣವಾಗಿಯೂ ವಿವರಿಸುತ್ತಾ, ಸಾಧ್ಯವಿದ್ದಲ್ಲೆಲ್ಲ ಸ್ಥಳೀಯ ಮಾಹಿತಿ, ನಂಬಿಕೆ, ಜಾನಪದದಲ್ಲಿ ಆಯಾ ಪಕ್ಷಿಗಳ ಉಲ್ಲೇಖ, ಗಾದೆಗಳ ಜೊತೆ ಸಂಬಂಧ ಮುಂತಾದ ಅನೇಕ ಮಾಹಿತಿಗಳನ್ನೂ ಈ ಪುಸ್ತಕದಲ್ಲಿ ಸೇರಿಸಿದ್ದಾರೆ. ಪುಸ್ತಕದ ಹೆಸರಿಗೆ ತಕ್ಕಂತೆ ಅನೇಕ ಪಕ್ಷಿಗಳ ವಿಸ್ಮಯ ಸಂಗತಿಗಳ ವಿವರಣೆ ನಮ್ಮ ಮುಂದೆ ಒಂದು ವಿಸ್ಮಯ ಲೋಕದ ಅನಾವರಣ ಮಾಡುತ್ತದೆ. ಇಲ್ಲಿ ಸಮಗ್ರ ಮಾಹಿತಿ ವಿವಿಧ ಆಕರಗಳಿಂದ ಸಂಗ್ರಹಿಸಿರಬಹುದಾದರೂ ತಮ್ಮ ವೈಯಕ್ತಿಕ ಅನುಭವವನ್ನು ಇಲ್ಲಿ ಸೂಕ್ತವಾಗಿ ಬೆರೆಸಿರುವುದು ಪುಸ್ತಕವನ್ನು ಮತ್ತಷ್ಟು ಪಕ್ವವಾಗಿಸಿದೆ. ಅನೇಕ ಬಾರಿ ಲೇಖಕರು ಗೂಡಿನ ವಿಷಯ ಬರೆಯುವಾಗ ವಹಿಸುವ ಕಾಳಜಿ, ಕೊಡುವ ಎಚ್ಚರಿಕೆಗಳು ಪಕ್ಷಿಗಳ ಕುರಿತಾದ ಅವರ ಕಾಳಜಿಯನ್ನು ತೋರಿಸುತ್ತದೆ ಮತ್ತು ಪಕ್ಷಿಗಳ ಫೋಟೋ ತೆಗೆಯುವಾಗ ಕೆಲವರು ಬಳಸುವ ತಪ್ಪು ದಾರಿಗಳು ಮತ್ತು ತಮ್ಮ ಉತ್ಸಾಹದಿಂದ ಪಕ್ಷಿಗಳಿಗೆ ಮತ್ತು ಮೊಟ್ಟೆ ಮರಿಗಳಿಗೆ ತಂದೊಡ್ಡಬಹುದಾದ ಅಪಾಯಗಳ ಬಗ್ಗೆ ಸೂಕ್ತ ಎಚ್ಚರಿಕೆಯನ್ನು ಕೊಟ್ಟಿದ್ದಾರೆ. ಇದೆಲ್ಲಕ್ಕೂ ಪುಟವಿಟ್ಟಂತೆ ವಿಶ್ವವಿಖ್ಯಾತಿಯ ಪಕ್ಷಿ ಛಾಯಾಗ್ರಾಹಕರಾದ ಶ್ರೀ ಕ್ಲೆಮೆಂಟ್ ಎಂ. ಫ್ರಾನ್ಸಿಸ್ ಅವರ ಸುಂದರ ಛಾಯಾಚಿತ್ರಗಳು ವಿಶೇಷ ಮೆರುಗು ಕೊಟ್ಟಿವೆ.

ಡಾ. ಶ್ರೀಕಾಂತ ಎಸ್. ಹೆಗಡೆ

(ಮುನ್ನುಡಿಯಿಂದ)

ISBN 81-969147-6-8

ನಮ್ಮ ಆನ್‌ಲೈನ್ ಮಳಿಗೆ

www.navakarnataka.com

Code : 004730

₹ 790